ಕಾನನ

ನವೆಂಬರ್-2023

ನಿಸರ್ಗದೆಡೆಗೆ ಪಯಣ

WCG
Wildlife Conservation Group

ಕಾನನ

ನಿಸರ್ಗದೆಡೆಗೆ ಪಯಣ

ಮುಖಪುಟ

ಹಿಮಾಲಯದ ಕಿತ್ತಳೆ ಹೊಟ್ಟೆಯ ಅಳಿಲು

© ಹೃಷಿಕೇಶ್ ರಾವ್

ನವೆಂಬರ್–2023

ಲೇಖನಗಳು

* ಪಕ್ಷಿಗಳ ವಂಶಾಭಿವೃದ್ಧಿ – ಬಸನಗೌಡ ಎನ್. ಬಗಲಿ
* ವಡೇನಕೆರೆ ಕೆರೆ ಹಬ್ಬ – ೨೦೨೩ – ಶಂಕರಪ್ಪ ಕೆ. ಪಿ.
* ಸೋಮಾರಿ ಮಿಡತೆ (ಕೀಟದ ನಂಟು) – ಅನುಪಮಾ ಕೆ. ಬೆಣಚಿನಮರ್ಡಿ
* ಜಿಮ್ ಕಾರ್ಬೆಟ್ ಕಾಡಿನ ರೋಚಕ ಅನುಭವದ ಕಥನ ಭಾಗ ೨ – ಗುರು ಪ್ರಸಾದ್ ಕೆ. ಆರ್.
* ಚೋರ ಜೇಡದ ವಿಚಾರ! (ವಿವಿ ಅಂಕಣ) – ಜೈಕುಮಾರ್ ಆರ್.
* ಚಿಟ್ಟೆ (ಕವನ) – ಚನ್ನಕೇಶವ ಜಿ. ಲಾಳನಕಟ್ಟೆ
* ಪ್ರಕೃತಿ ಬಿಂಬ – ದೀಪಕ್ ಎಲ್. ಎಂ., ದೀಪ್ತಿ ಎನ್.

ವಿನ್ಯಾಸ

ಧನರಾಜ್ ಎಂ.

ಮುಖಪುಟ ಛಾಯಾಚಿತ್ರ

ಮಂಥನ್ ವೆಂಕಟೇಶ್ ಪ್ರಸಾದ್

ಪರಿಷ್ಕರಣೆ

ಮುರಳಿ ಎಸ್.

ಡಾ. ಮಧುಸೂಧನ ಹೆಚ್. ಸಿ.

© ಶಶಿಧರಸ್ವಾಮಿ ಆರ್. ಹಿರೇಮಠ

ಪಕ್ಷಿಗಳ ವಂಶಾಭಿವೃದ್ಧಿ

ಅದೊಂದು ದಿನ ಮಾವಿನ ಮರದಲ್ಲಿ 'ಖಗರತ್ನ' (Purple-rumped sunbird) ಸಣ್ಣ ಟೊಂಗೆಯ ಮೇಲೆ ಕುಳಿತಿರುವುದನ್ನು ನೋಡಿದೆ. ಆದರೆ ಆ ಹಕ್ಕಿಯ ವರ್ತನೆ ವಿಚಿತ್ರವಾಗಿತ್ತು, ತನ್ನ ಬಾಯಲ್ಲಿ ಯಾವುದೋ ಒಂದು ವಸ್ತುವನ್ನು ಹಿಡಿದುಕೊಂಡು ಅತ್ತಿಂದಿತ್ತ ಗಾಬರಿಯಿಂದ ನೋಡುತ್ತಿತ್ತು. ಅದೇಕೆ ಹೀಗೆ ವರ್ತಿಸುತ್ತಿದೆ ಎಂದು ಹತ್ತಿರ ಹೋಗಿ ನೋಡಿದಾಗ, ಆ ಹಕ್ಕಿಯು ಗೂಡು ಕಟ್ಟುತ್ತಿರುವುದು ಕಂಡುಬಂದಿತು. ಆಗ ಅಲ್ಲಿಯೇ ಸ್ವಲ್ಪ ದೂರದಲ್ಲಿ (ಪಕ್ಷಿಗೆ ತಿಳಿಯದ ಹಾಗೆ) ಕುಳಿತು ಸೂಕ್ಷ್ಮವಾಗಿ ಆ ಹಕ್ಕಿಯ ವರ್ತನೆಯನ್ನು ವೀಕ್ಷಿಸಿದೆ. ಹೆಣ್ಣು ಹಕ್ಕಿಯು ಸಂಪೂರ್ಣವಾಗಿ ಆ ಗೂಡನ್ನು ಕಟ್ಟುತ್ತಿದ್ದರೆ, ಗಂಡು ಹಕ್ಕಿಯು ಶಬ್ದ ಮಾಡುತ್ತಾ ಹೆಣ್ಣನ್ನು ಹಿಂಬಾಲಿಸುತ್ತಿದ್ದರೂ ಗೂಡು ಕಟ್ಟುವಲ್ಲಿ ಸಕ್ರಿಯವಾಗಿ ಭಾಗಿಯಾಗಲಿಲ್ಲ. ನಾನು, ಗಂಡು ಪಕ್ಷಿಯು ಹೆಣ್ಣು ಪಕ್ಷಿಯ ರಕ್ಷಣೆಗಾಗಿ ಹಿಂಬಾಲಿಸುತ್ತಿರಬಹುದು ಎಂದೆಣಿಸಿದೆ.

ಇದೇ ತರಹ ಹೆಣ್ಣು ಹಕ್ಕಿಯು ಸಂಪೂರ್ಣವಾಗಿ ಗೂಡನ್ನು ರಚನೆ ಮಾಡಲು ಆರು ದಿನಗಳ ಸಮಯ ತೆಗೆದುಕೊಂಡರೆ, ಗಂಡು ಹಕ್ಕಿಯು ಅದಕ್ಕೆ ಕಾವಲಾಗಿತ್ತು. ಈ ಹಕ್ಕಿಗಳು ಗೂಡು ಕಟ್ಟುವ ಕಲೆಯನ್ನು ಸಂಪೂರ್ಣವಾಗಿ ಒಂದು ದಿನ ಮುಂಜಾನೆ ಎಂಟು ಗಂಟೆಯಿಂದ ಸಾಯಂಕಾಲ ಆರು ಗಂಟೆಯವರೆಗೆ ಕುಳಿತು ನೋಡಿದಾಗ, ಹೆಣ್ಣು ಹಕ್ಕಿಯು ಗೂಡು ಕಟ್ಟಲು ವಿವಿಧ ಬಗೆಯ ವಸ್ತುಗಳನ್ನು 201 ಬಾರಿ ತಂದು ಗೂಡು ರಚನೆ ಮಾಡಿರುವುದು ಕಂಡುಬಂದಿತು. ನಂತರ ಆ ಗೂಡಿನಲ್ಲಿ ಮೊಟ್ಟೆ ಇಟ್ಟು, ಮರಿ ಮಾಡಿ, ಈ ಕುಟುಂಬ ಆ ಜಾಗದಿಂದ ಕೆಲವು ದಿನಗಳ ನಂತರ ತನ್ನ ಪುಟ್ಟ ಮರಿಗಳೊಂದಿಗೆ ಹಾರಿಹೋದವು. ಇದೇ ತರಹ ಎಲ್ಲಾ ಹಕ್ಕಿಗಳು ಕಷ್ಟ ಪಡುವುದು ತಮ್ಮ ಸಂತಾನೋತ್ಪತ್ತಿಗಾಗಿ ಮತ್ತು ತಮ್ಮ ವಂಶಾಭಿವೃದ್ಧಿಗಾಗಿ.



ವಂಶಾಭಿವೃದ್ಧಿ ಎನ್ನುವುದು ಪ್ರತಿಯೊಂದು ಜೀವಿಯಲ್ಲಿ ನಡೆಯುವ ಒಂದು ನಿರಂತರವಾದ, ಬಹು ಮುಖ್ಯವಾದ ಪ್ರಕ್ರಿಯೆಯಾಗಿದೆ. ಈ ಸಂತಾನೋತ್ಪತ್ತಿ ಪ್ರಕ್ರಿಯೆ ಮೀನು, ಉಭಯವಾಸಿ, ಸರೀಸೃಪ, ಸಸ್ತನಿ ಹಾಗೂ ಪಕ್ಷಿಗಳಲ್ಲಿ ಬಹಳ ಅರ್ಥಪೂರ್ಣವಾಗಿ ನಡೆಯುತ್ತದೆ.

ಪ್ರಮುಖವಾಗಿ ಪಕ್ಷಿಗಳು ಸಂತಾನೋತ್ಪತ್ತಿಗೆ ಪ್ರಯಾಸ ಪಡುವಷ್ಟು ಭೂಮಿಯ ಮೇಲೆ ಮತ್ತಾವ ಜೀವಿಗಳು ಪ್ರಯಾಸ ಪಡುವುದಿಲ್ಲವೇನೋ? ಭಕ್ಷಕಗಳಿಂದ ರಕ್ಷಣೆ, ಗೂಡು ಕಟ್ಟುವ ಪರಿ, ಅದಕ್ಕಾಗಿ ಉಪಯೋಗಿಸುವ ವಸ್ತುಗಳು, ಪ್ರತಿಕೂಲ ಹವಾಮಾನದಿಂದ ರಕ್ಷಿಸಿಕೊಳ್ಳಲು ಸಾವಿರಾರು ಕಿಲೋಮೀಟರ್ ದೂರದವರೆಗೆ ವಲಸೆ ಬರುವುದು ಎಲ್ಲವೂ ನಿಬ್ಬೆರಗಾಗಿಸುವಂತವು.

ಪ್ರತಿಯೊಂದು ಜೀವಿಗಳು ತನ್ನದೇ ಆದಂತಹ ಆವಾಸಸ್ಥಾನ ಹೊಂದಿರುತ್ತವೆ. ಆದರೆ ಪಕ್ಷಿಗಳು ವಾಸಸ್ಥಾನಕ್ಕೆ ಗೂಡು ಕಟ್ಟುವ ಕಲೆ ವಿಶಿಷ್ಟವಾದದ್ದು ಹಾಗೂ ಕಲಾತ್ಮಕವಾದ ತಾಂತ್ರಿಕತೆಯಿಂದ ಕೂಡಿರುತ್ತದೆ. ಪಕ್ಷಿಗಳು ವಾಸಕ್ಕಾಗಿ ಅದರಲ್ಲೂ ಸಂತಾನೋತ್ಪತ್ತಿಗಾಗಿ ಗೂಡುಕಟ್ಟುತ್ತವೆ. ಒಂದೊಂದು ಪ್ರಭೇದದ ಪಕ್ಷಿಗಳ ಗೂಡುಗಳು ಒಂದೊಂದು ತರಹದ ಭಿನ್ನತೆಯಿಂದ ಕೂಡಿರುತ್ತವೆ. ಗೂಡುಕಟ್ಟುವ ಮುಂಚೆ ಸ್ಥಳದ ಆಯ್ಕೆ ಮಾಡುವಾಗ ವಹಿಸುವ ಚಾಣಾಕ್ಷತೆ ಬಹುಶಃ ಬುದ್ದಿಶಾಲಿ ಮಾನವ ಕೂಡ ವಹಿಸುವುದಿಲ್ಲ; ಅಷ್ಟು ತೀಕ್ಷ್ಣವಾಗಿ ಸ್ಥಳದ ಆಯ್ಕೆ ನಡೆಯುತ್ತದೆ. ಗಾಳಿ-ಮಳೆಗೆ ವಿರುದ್ದವಾಗಿ, ಭಕ್ಷಕ ಜೀವಿಗಳಿಗೆ ಗೂಡು ಸಿಗದ ಜಾಗದಲ್ಲಿ ಹಾಗೂ ಗಿಡಕ್ಕೆ ಗೂಡುಕಟ್ಟುವ ಕಡ್ಡಿಯನ್ನು ಆಯ್ಕೆ ಮಾಡುವಾಗಲೂ ಅದರ ತೀಕ್ಷ್ಣತೆ ಅಗಾಧವಾದದ್ದು. ಅಷ್ಟು ಸೂಕ್ಷ್ಮವಾದ ಜಾಗದಲ್ಲಿ ಗೂಡುಕಟ್ಟುತ್ತವೆ. ಅವುಗಳು ಸಂತಾನೋತ್ಪತ್ತಿಗಾಗಿ ಗೂಡುಕಟ್ಟಲು ಸಾವಿರಾರು ಬಾರಿ ಹುಲ್ಲು ಕಡ್ಡಿಗಳನ್ನು ತಂದು ಗೂಡು ಕಟ್ಟುತ್ತವೆ. ಗೀಜಗ (Baya weaver), ದರ್ಜಿ (Tailor bird), ನೊಣಹಿಡುಕ (Flycatcher), ಕವಲುತೋಕೆ (Swallow) ಹಕ್ಕಿಗಳ ಗೂಡುಗಳು ಬಹಳ ಕಲಾತ್ಮಕವಾಗಿ ಹಾಗೂ ತಾಂತ್ರಿಕತೆಯಿಂದ ಕೂಡಿರುತ್ತವೆ. ಪಕ್ಷಿಗಳಲ್ಲಿಯೇ ಗೀಜಗ ಹಕ್ಕಿಯು ಗೂಡು ಕಟ್ಟುವುದರಲ್ಲಿ ನಿಸ್ಸೀಮ. ಆದ್ದರಿಂದ ಇದನ್ನು ನೇಕಾರ ಹಕ್ಕಿ ಎಂದು ಸಹ ಕರೆಯುತ್ತಾರೆ.

ಕೆಲವು ಪಕ್ಷಿಗಳು ತಾವೇ ಸ್ವತಃ ಗೂಡು ಕಟ್ಟಿದರೆ, ಮತ್ತೆ ಕೆಲವು ಪಕ್ಷಿಗಳು ಇನ್ನೊಂದು ಪಕ್ಷಿ ಬಳಸಿ ಬಿಟ್ಟ ಗೂಡುಗಳನ್ನು ಬಳಸುತ್ತವೆ. ಉದಾಹರಣೆಗೆ, ಮರಕುಟುಕ ಹಕ್ಕಿ ಕಟ್ಟಿದ ಗೂಡುಗಳನ್ನು ಬೇರೆ ಬೇರೆ ಪಕ್ಷಿಗಳು ಬಳಸುತ್ತವೆ. ಪಕ್ಷಿಗಳು ಗೂಡು ಕಟ್ಟಲು, ಪರಿಸರದಲ್ಲಿ ಸಿಗುವ ಹುಲ್ಲು, ಕಡ್ಡಿ, ಎಲೆ ಹಾಗೂ ಜೇಡಗಳ ಬಲೆಗಳನ್ನು ಉಪಯೋಗಿಸುತ್ತವೆ. ಪ್ರಮುಖವಾಗಿ ಪಕ್ಷಿಗಳು ತಮ್ಮ ವಂಶಾಭಿವೃದ್ಧಿಯನ್ನು ಮುಂದುವರಿಸಲು ಹಾಗೂ ವಾಸಸ್ಥಾನಕ್ಕಾಗಿ ಗೂಡು ಕಟ್ಟುವುದು ವಾಡಿಕೆ. ಆದ್ದರಿಂದ ಪಕ್ಷಿ ಸಂಕುಲವನ್ನು ಹಾಗೂ ಅದರ ಗೂಡುಗಳನ್ನು ಕಾಪಾಡುವುದು ಹಾಗೂ ಪರಿಸರವನ್ನು ಸಮತೋಲನದಲ್ಲಿಡುವುದು ನಮ್ಮೆಲ್ಲರ ಮುಖ್ಯ ಪಾತ್ರವಾಗಿದೆ.

ಲೇಖನ: ಬಸನಗೌಡ ಎನ್. ಬಗಲಿ

ಉತ್ತರ ಕನ್ನಡ ಜಿಲ್ಲೆ

ವಡೇನಕೆರೆ ಕೆರೆ ಹಬ್ಬ – ೨೦೨೩

ಬನ್ನಿ ಕಣ್ಮರೆಯಾಗುತ್ತಿರುವ ಕಾಮನ್ಸ್ ಗಳನ್ನು ಮರಳಿ ಪಡೆಯೋಣ

ನಮ್ಮ ಸುತ್ತ ಮುತ್ತ ಇರುವ ಕೆರೆ, ಗೋಮಾಳ, ಸಾಲು-ಮರ, ಗುಂಡುತೋಪುಗಳನ್ನು ಮತ್ತು ಅಲ್ಲಿನ ಗಿಡಮರಬಳ್ಳಿ, ಜೀವವೈವಿಧ್ಯ ಎಲ್ಲವುದನ್ನು ಸೇರಿಸಿ ಕಾಮನ್ಸ್ ಎನ್ನುತ್ತಾರೆ.

'ಕಾಮನ್ಸ್ ಗಳು' ಇವು ಒಂದು ಸಮುದಾಯದ ಜನಗಳಿಂದ ಅಲ್ಲಿನ ಜನ-ಜಾನುವಾರುಗಳಿಗಾಗಿ ನೂರಾರು ವರ್ಷಗಳಿಂದ ರಕ್ಷಿಸಿ ಮೀಸಲಿಟ್ಟ ಪ್ರದೇಶಗಳಾಗಿವೆ. ಕೆರೆ, ಕುಂಟೆ, ಬಾವಿ, ಸಾಲುಮರ, ಗುಂಡುತೋಪು, ಅರಳಿಕಟ್ಟೆ ಗೋಮಾಳ, ಸ್ಮಶಾನ, ರಾಜಕಾಲುವೆ ಇವೆ ಮೊದಲಾದ ಸಮುದಾಯಕ್ಕೆ ಸಂಬಂಧಿಸಿದ ಪ್ರದೇಶಗಳು. ಇವು ಆ ಪ್ರದೇಶದಲ್ಲಿ ವಾಸಿಸುವ ಜನರಿಗೆ ಮತ್ತು ಇತರೆ ಜೀವ ಜಂತುಗಳಿಗೆ ಹಲವು ಪ್ರಮುಖ ಸೇವೆಗಳನ್ನು ನಿರಂತರವಾಗಿ ಒದಗಿಸುತ್ತಿವೆ. ಆದರೆ ಬದಲಾಗುತ್ತಿರುವ ಜನರ ಆದ್ಯತೆ ಮತ್ತು ಜೀವನ ಶೈಲಿಯ ಹಾಗು ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಅನಿಯಂತ್ರಿತ ನಗರ ವಲಸೆಯ ಪರಿಣಾಮವಾಗಿ ಬೆಂಗಳೂರು ಮಹಾನಗರದ ಕಾಮನ್ಸ್ ಗಳು ತೀವ್ರವಾದ ಒತ್ತಡಗಳನ್ನು ಎದರಿಸುತ್ತಿವೆ .

ಹಿಂದಿನ ತಲೆಮಾರಿನ ಜನರಿಗೆ ಕಾಮನ್ಸ್ ಗಳ ಪ್ರಾಮುಖ್ಯತೆ ತಿಳಿದಿತ್ತು. ಈಗಿನ ನವ ನಾಗರಿಕತೆಯ ಜನಕ್ಕೆ ತಿಳಿಯುತ್ತಿಲ್ಲ. ಏಕೆಂದರೆ ಸೌದೆಗೆ - ಗ್ಯಾಸ್ ಇದೆ. ಔಷಧಿಗೆ - ಆಸ್ಪತ್ರೆ ಇದೆ. ನೀರಿಗೆ - ನಲ್ಲಿ ಇದೆ. ಹಾಲಿಗೆ - ಡೈರಿ ಇದೆ. ಊಟಕ್ಕೆ - ಹೋಟೆಲ್ ಇದೆ. ಧವಸ ಧಾನ್ಯಗಳಿಗೆ, ಸೊಪ್ಪು - ತರಕಾರಿಗಳಿಗೆ ಸಂತೆಗಳಿವೆ, ಅಂಗಡಿಗಳಿವೆ. ಇದರಿಂದ ಕಾಮನ್ಸ್ ಗಳಿಂದ ಜನರು ದೂರ ಸರಿದಿದ್ದಾರೆ. ಇಂದು ಕಾಮನ್ಸ್‌ಗಳು ಜನರ ನೇರ ಭಾಗವಹಿಸುವಿಕೆಯಿಂದ ದೂರವಾಗಿ ಯಾರಿಗೂ ಬೇಡವಾಗಿ ಹೇಳುವವರು ಕೇಳುವವರು

ಇಲ್ಲದೆ ನಿರ್ಲಕ್ಷಕ್ಕೆ ಗುರಿಯಾಗಿವೆ. ಇದರ ನೇರ ಲಾಭ ಪಡೆಯುತ್ತಿರುವ ಭೂಗಳ್ಳರು, ರಾತ್ರೋ ರಾತ್ರಿ ಕಾಮನ್ಸ್‌ಗಳನ್ನು ಒತ್ತುವರಿ ಮಾಡಿ, ಜೆಸಿಬಿಯಿಂದ ಸಮ ಮಾಡಿ, ರಸ್ತೆ ಚರಂಡಿ ನಿರ್ಮಿಸಿ, ಕಬಳಿಸುತ್ತಿದ್ದಾರೆ. ಇದರ ಪರಿಣಾಮವನ್ನು ಅಲ್ಲಿ ಸಾವಿರಾರು ವರ್ಷದಿಂದ ನೆಲೆ ನೆಲೆಸಿ ಜೀವಿಸುತ್ತಿರುವ ಮರ-ಗಿಡ, ಕ್ರಿಮಿ-ಕೀಟ, ಏಡಿ-ಆಮೆ, ಮೀನು, ಕಪ್ಪೆ, ಚಿಟ್ಟೆ, ಪಕ್ಷಿಗಳು ತಮ್ಮ ನೆಲೆ ಕಳೆದುಕೊಂಡು ಆಶ್ರಯ ರಹಿತವಾಗಿವೆ. ನೆಲೆ ಕಳೆದುಕೊಂಡ ಹಲವು ಜೀವಿಗಳು ಅಲೆದು ಅಲೆದು ಟಾರ್ ರಸ್ತೆಗೆ ಬಂದು ಚಕ್ರಕ್ಕೆ ತಲೆಕೊಟ್ಟು ಸಾಯುತ್ತಿವೆ. ಇವುಗಳ ಗೋಳು ಕೇಳುವವರು ಯಾರು? ಕಂಡರೂ ಕಾಣದು.! ಆಳುವ ಸರ್ಕಾರಕ್ಕೆ, ದೇಶಕ್ಕೆ ಜನರ ಸೌಖ್ಯವೇ ಮುಖ್ಯ. ಈ ಹುಳ-ಹುಪ್ಪಟ್ಟೆಗಳ ಗೋಳು ಯಾರಿಗೂ ಕೇಳದು. ಈ ರೀತಿ ನಿರ್ಲಕ್ಷಕ್ಕೆ ಒಳಗಾಗಿರುವ ಬೆಂಗಳೂರು ಹೊರವಲಯದ ಕಾಮನ್ಸ್‌ಗಳ ಬಗ್ಗೆ, ಅಲ್ಲಿನ ಯುವಜನರಿಗೆ, ವಿದ್ಯಾರ್ಥಿಗಳಿಗೆ, ತಿಳಿಸುವುದು, ಅಳಿದುಳಿದಿರುವ ಕಾಮನ್ಸ್ ಬಗ್ಗೆ ಅರಿವು ಮೂಡಿಸಿ ಮತ್ತೆ ಜನರ ಒಡೆತನಕ್ಕೆ ಪಡೆಯುವ ಹಾಗೆ ಮಾಡುವ ಸಣ್ಣ ಪ್ರಯತ್ನವೇ **ಪ್ರಾಜೆಕ್ಟ್ ಕಾಮನ್ಸ್.** ಇದರ ಒಂದು ದಿವ್ಯ ನಿದರ್ಶನವೇ ವಡೆಯನ ಕೆರೆ ಹಬ್ಬ.

ಆನೇಕಲ್ ತಾಲ್ಲೂಕು, ಮಂಟಪ ಗ್ರಾಮ ಪಂಚಾಯಿತಿಯ ಕಾಳೇಶ್ವರಿ ಗ್ರಾಮದ ವಡೇನಕೆರೆಯ ಸುತ್ತಲಿನ ಖಾಲಿ ಜಾಗದಲ್ಲಿ ಗಿಡ ನೆಡುವ ಕಾರ್ಯಕ್ರಮವನ್ನು ದಿನಾಂಕ 8/10/2023 ರಂದು ಡಬ್ಲ್ಯೂ ಸಿ ಜಿ ಮತ್ತು ಸ್ನೇಹಸಂಪದ ತಂಡ ಸೇರಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ದಯಾನಂದ ಸಾಗರ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ಮತ್ತು ನೃಪತುಂಗ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ಅಪ್ಲೈಡ್ ಸಿಸ್ಟಮ್ಸ್ ಕಂಪನಿಯ ಕಾರ್ಮಿಕರು, ಇನ್ನು ಕೆಲವು ಸ್ವಯಂ ಸೇವಕರು ಭಾಗವಹಿಸಿ ಯಶಸ್ವಿಗೊಳಿಸಿದರು. ಬೆಳಿಗ್ಗೆ 8 ಗಂಟೆಗೆ ಶುರುವಾದ ಕೆರೆ ಹಬ್ಬ ಕಾರ್ಯಕ್ರಮದಲ್ಲಿ ಮೊದಲು ಕೆರೆಯ ಇತಿಹಾಸ, ಪರಿಚಯವನ್ನು ಕೆರೆಹಬ್ಬಕ್ಕೆ ಬಂದಿದ್ದ ಎಲ್ಲರಿಗೂ ತಿಳಿಸಿಕೊಡಲಾಯಿತು. ನಂತರ

ವಿದ್ಯಾರ್ಥಿಗಳು ಶ್ರಮದಾನ ಮಾಡಿ, ಕೆರೆಯ ಸುತ್ತಮುತ್ತ ಬಿದ್ದಿದ್ದ ಪ್ಲಾಸ್ಟಿಕ್ ಕಸವನ್ನು ಆಯ್ದು ಸ್ವಚ್ಛಗೊಳಿಸಿದರು. ನಂತರ ಇಡ್ಲಿ ಸಾಂಬಾರ್ ಸವಿದರು. ಡಬ್ಲ್ಯು ಸಿ ಜಿ ಯು ಕೆರೆಯ ಅಂಗಳದಲ್ಲಿ ಏರ್ಪಡಿಸಿದ್ದ ವನ್ಯಜೀವಿ ಛಾಯಾಚಿತ್ರಗಳನ್ನು ವೀಕ್ಷಿಸಿ ಕೆರೆಯ ಪರಿಸರದಲ್ಲಿರುವ ಕಪ್ಪೆ, ಪಕ್ಷಿ, ಕೀಟಗಳ ಬಗ್ಗೆ ತಿಳಿದುಕೊಂಡರು. ನಂತರ ಅವರೇ ಸಣ್ಣ ಸಣ್ಣ ಗುಂಪುಗಳಾಗಿ ಗುಂಪು ಗುಂಪಾಗಿ ಸೇರಿಕೊಂಡು, ನೇರಳೆ, ಹಲಸು, ಗಸಗಸೆ, ಹೊಳೆಮತ್ತಿ, ಆಲ, ಅತ್ತಿ ಪ್ರಭೇದದ ಸುಮಾರು 140 ಗಿಡಗಳನ್ನು ಒತ್ತೊಯ್ದು ಪಾತಿಗಳಲ್ಲಿ ಇಟ್ಟು ನೆಟ್ಟರು. ನಾಟಿ ಮಾಡಿದ ಗಿಡಗಳಿಗೆ ಮಾನವ ಸರಪಳಿ ನಿರ್ಮಿಸಿ ಕೆರೆಯಿಂದಲೇ ನೀರನ್ನು ತೆಗೆದು ಗಿಡಗಳಿಗೆ ಜೀವ ನೀರುಣಿಸಿದರು. ಕುಗ್ಗದ ಉತ್ಸಾಹ, ಅಪರಿಮಿತ ಜೋಷ್ ನಿಂದ ಎಲ್ಲಾ ಕೆಲಸ ಸಾಂಘವಾಗಿ ಜರುಗಿತು. ಕೆರೆಯ ಬಳಿಯ ಹೊಂಗೆಯ ನೆರಳಲ್ಲಿ ಬೋಜನ ಸವಿದು, ಎಲ್ಲರೂ "ಕಾಮನ್ಸ್ ಗಳನ್ನು ಉಳಿಸಲು ನಾವಿದ್ದೇವೆ" ಎಂದು ಹೇಳಿ ಹೊರಟರು. ಊಟದ ಕೊನೆಯ ಸಾಲಿನ ಕೆಲವರಿಗೆ ಜಾಮೂನು ಸಾಲ್ವೇಜ್ ಬಂದದ್ದು ಬಿಟ್ಟರೆ, ಉಳಿದಂತೆ ವಡೇನಕೆರೆ ಕೆರೆ ಹಬ್ಬ ಸಂಪನ್ನವಾಗಿತ್ತು.

ಇಂದಿನ ವಿದ್ಯಾರ್ಥಿಗಳನ್ನು ಯುವಕರನ್ನು ಪರಿಸರ ಸಂರಕ್ಷಣೆಯ ಕಾರ್ಯಗಳಲ್ಲಿ ತೊಡಗುವಂತೆ ಮಾಡುವುದೇ ಒಂದು ಸವಾಲಿನ ಕೆಲಸ. ಅದಕ್ಕೆ ಕಾರಣ ಹಲವು. ಆದರೆ ಈ ಕೆರೆ ಹಬ್ಬದಲ್ಲಿ ಸರಿ ಸುಮಾರು 120 ಜನ ಭಾಗವಹಿಸಿದ್ದರು ಎಂಬುದು ಸಂತಸದ ವಿಷಯವೇ ಸರಿ!

ಲೇಖನ: **ಶಂಕರಪ್ಪ ಕೆ. ಪಿ.**

ಡಬ್ಲ್ಯು. ಸಿ. ಜಿ. ಬೆಂಗಳೂರು ನಗರ ಜಿಲ್ಲೆ

© iStock by Getty Images

© ಶ್ರೀನಿವಾಸ್ ಕೆ. ಎಸ್.

ಸೋಮಾರಿ ಮಿಡತೆ

ಬೆಳಿಗ್ಗೆ ತುಳಸಿ ಗಿಡಕ್ಕೆ ಪೂಜೆ ಮಾಡಿ ನೀರು ಹಾಕುತ್ತಿದ್ದಾಗ, ಅಲ್ಲೇ ಮೆಟ್ಟಿಲಿನ ಮೇಲೆ ಕುಳಿತಿದ್ದ ನನ್ನ ಮಗ ಪಕ್ಕದಲ್ಲಿರುವ ಗೋಡೆಯನ್ನು ದಿಟ್ಟಿಸುತ್ತಾ,

"ನಾವೆಲ್ಲರೂ... ಮಜಾ ಮಾಡೋಣ,

ನಾಳೆಯ ಚಿಂತೆ ನಮಗೆ ಇಲ್ಲಾ.

ಹೊಯ್..."

ಎಂದು ಹಾಡುತ್ತಿದ್ದ. ಈ ಹಾಡನ್ನು ಎಲ್ಲೋ ಕೇಳಿದ್ದೇನಲ್ಲಾ? ಅಂತ ಯೋಚಿಸತೊಡಗಿದೆ. ಮತ್ತೆ

"ನಾವೆಲ್ಲರೂ ಕೆಲಸ ಮಾಡೋಣ,

ಭವಿಷ್ಯದ ಬಗ್ಗೆ ಯೋಚಿಸೋಣ.

ಹೊಯ್..."

ಅಂತ ಮುಂದಿನ ಸಾಲನ್ನು ಹಾಡಿದ! ಅವನು ಎರಡು ವರ್ಷದ ಹಿಂದೆ ಕಲಿತಿದ್ದ ಹಾಡಿದು ಈಗೇಕೆ ನೆನಪಾಯಿತು ಇವನಿಗೆ? ಅಂತ "ಏನೋ ಇವತ್ತು ಇದನ್ನ ಹಾಡ್ತಾ ಇದ್ದೀಯಾ?" ಎಂದು ಕೇಳಿದೆ. ಸಿಕ್ಕಿದ್ದೇ ಚಾನ್ಸು ಅಂದುಕೊಂಡ ನನ್ನ ಕಿಲಾಡಿ ಮಗ, ತನ್ನ ಟಿ ಶರ್ಟಿನ ಕಾಲರ್ ಅನ್ನು ಏರಿಸುತ್ತಾ "ಅಲ್ಲಿ ನೋಡಲ್ಲಿ" ಅಂತ ಗೋಡೆ ಕಡೆ ಕೈ ತೋರಿಸಿದ. ಅಲ್ಲೊಂದು ಹಸಿರು ಮಿಡತೆ ಇವನ ಹಾಡನ್ನು ಕೇಳುತ್ತ ಕುಳಿತಿತ್ತು. ನಾನು ದಿಟ್ಟಿಸಲು ಶುರು

ಮಾಡಿದೊಡನೆ ತನ್ನ ತಪಸ್ಸಿಗೆ ಭಂಗವಾದಂತೆ ಟಪ್... ಎಂದು ಒಂದೇ ನೆಗೆತಕ್ಕೆ ಎಲ್ಲಿಯೋ ಅದೃಶ್ಯವಾಗಿಬಿಟ್ಟಿತು. ಆಗ ಅರ್ಥವಾಯಿತು, ಎರಡು ವರ್ಷದ ಹಿಂದೆ ಶಾಲೆಯಲ್ಲಿ, ಕಥೆ ಹೇಳುವ ಸ್ಪರ್ಧೆ ಇದ್ದಾಗ ಇವನಿಗೆ ಸೋಮಾರಿ ಮಿಡತೆ ಬಗ್ಗೆ ಕಥೆ ಹೇಳಿ ಕೊಟ್ಟಿದ್ದೆ. ಕಥೆ ನೆನಪಿರಲೆಂದು ಈ ಹಾಡನ್ನು ಕೂಡ ಹೇಳಿಕೊಟ್ಟಿದ್ದೆ. ಅದು ವ್ಯರ್ಥವಾಗಲಿಲ್ಲ ಎಂದುಕೊಂಡೆ. ಈಗ ಇನ್ನೂ ಸ್ವಲ್ಪ ಹೆಚ್ಚಿನ ಮಾಹಿತಿ ಕೊಡಬಹುದಲ್ಲವೇ? ಎಂದು ಯೋಚಿಸುತ್ತಾ ಮಗನೊಂದಿಗೆ ಸಂವಾದಕ್ಕೆ ಇಳಿದೆ.

ಮೊಟ್ಟ ಮೊದಲಿಗೆ ತಲೆಗೆ ಬಂದ ವಿಷಯ ಪ್ರಶ್ನೆಯೇ ಮಿಡತೆಯ ಮೈ ಬಣ್ಣ. ಅಂದು ಕಥೆ ಹೇಳಿದ್ದಾಗ ನಾನು ಅದನ್ನು ಹಸಿರು ಬಣ್ಣದಲ್ಲಿ ರೂಪಿಸಿದ್ದರೂ, ಮಿಡತೆಗಳು ಹಸಿರು ಬಣ್ಣ ಹೊರತು ಕಂದು ಬಣ್ಣ, ಕಂದು ಮಿಶ್ರಿತ ಕಪ್ಪು ಬಣ್ಣ ಹಾಗು ಬೂದು ಬಣ್ಣದಲ್ಲಿಯೂ ಸಹ ಹೆಚ್ಚು ಕಾಣಬಹುದಾಗಿದೆ. ಕೆಲ ಮಿಡತೆಗಳ ರೆಕ್ಕೆ ಬಣ್ಣ ಕೂಡ ತುಂಬಾ ಆಕರ್ಷಣೀಯವಾಗಿರುತ್ತವೆ. ಆದರೆ ಸಾಮಾನ್ಯವಾಗಿ ಕಂಡುಬರುವ ಮಿಡತೆಗಳೆಂದರೆ ಹಸಿರು ಮತ್ತು ಕಂದು ಬಣ್ಣದ್ದು. 'ಯಾಕೆ ಮಿಡತೆ ಹಸಿರು ಬಣ್ಣದ್ದಾಗಿರುತ್ತದೆ? ' ಎಂದು ನಾನು ಮಗನಿಗೆ ಪ್ರಶ್ನೆ ಕೇಳಿದಾಗ, ಆತ ತುಂಬಾ ಮುಗ್ಧ ಮತ್ತು ಪ್ರಾಮಾಣಿಕವಾಗಿ 'ಯಾಕೆಂದರೆ ಅದು ಹಸಿರು ಹುಲ್ಲನ್ನು ತಿನ್ನುತ್ತದೆಯಲ್ಲವೇ? ಅದಕ್ಕೆ!' ಅಂತ ಉತ್ತರಿಸಿದ. ನಾನು ಮತ್ತೆ 'ಹಾಗಾದರೆ ನಮ್ಮ ಊರಲ್ಲಿರುವ ಎಮ್ಮೆ ದಿನಾ ಹಸಿರು ಮೇವನ್ನೇ ತಿನ್ನುತ್ತದಲ್ಲವೇ? ಅದ್ಯಾಕೆ ಹಸಿರಾಗಿಲ್ಲ?' ಎಂದೆ. ಅದಕ್ಕೆ ಅವನು 'ಹೋ... ಹೌದಲ್ಲಾ?' ಎಂದು ನಗತೊಡಗಿದ! ವಿಷಯ ಮತ್ತೆ ಬೇರೆ ಕಡೆ ಹೊರಳುವುದಕ್ಕಿಂತ ಮುಂಚೆ ತುಂಬಾ ಎಚ್ಚರಿಕೆಯಿಂದ 'ನೋಡು, ಬೇರೆ ಪ್ರಾಣಿ ಪಕ್ಷಿಗಳಿಂದ ತಪ್ಪಿಸಿಕೊಳ್ಳಲು ತಮ್ಮ ಶರೀರದ ಮೈಬಣ್ಣವನ್ನು ತಮ್ಮ ಆವಾಸಸ್ಥಾನಕ್ಕೆ ಹೊಂದಿಸಿಕೊಳ್ಳಲು ಈ ವಿವಿಧ ಬಣ್ಣ! ಹಸಿರು ಹುಲ್ಲಿನಲ್ಲಿ ಹಸಿರು ಮಿಡತೆಯನ್ನು ಹುಡುಕುವುದು ಕಷ್ಟವಲ್ಲವೇ?' ಎಂದು ತಿಳಿ ಹೇಳಿದೆ. ಅಂದ ಹಾಗೆ ಇದು ಸಸ್ಯಾಹಾರಿಯಾಗಿದ್ದು, ಹೆಚ್ಚಾಗಿ ಹುಲ್ಲುಗಾವಲಿನ ಪ್ರದೇಶಗಳಲ್ಲಿ ಕಂಡು ಬರುತ್ತದೆ. ಅಷ್ಟೇ ಅಲ್ಲದೆ ನಮ್ಮ ಸುತ್ತಲಿನ ಕೈತೋಟದಲ್ಲಿ ಕೂಡ ಕಾಣಿಸುತ್ತದೆ. ಬಹುತೇಕ ಅತೀ ತಂಪಾದ ಮತ್ತು ಅತೀ ಉಷ್ಣದ ಪ್ರದೇಶಗಳನ್ನು ಬಿಟ್ಟು ಉಳಿದೆಲ್ಲ ಪ್ರದೇಶಗಳಲ್ಲಿಯೂ ಕಂಡುಬರುತ್ತದೆ. ಜಗತ್ತಿನಲ್ಲಿ ಮಿಡತೆಯ ಸುಮಾರು 11,000 ಪ್ರಭೇಧಗಳಿವೆಯಂತೆ! ಇದು ಆರ್ಥೋಪ್ಟೆರಾ (Orthoptera) ಎಂಬ ವರ್ಗದ, ಕೈಲಿಫೆರಾ (Caelifera) ಎಂಬ ಉಪವರ್ಗಕ್ಕೆ

ಸೇರಲ್ಪಡುತ್ತದೆ. ಮಿಡತೆಯ ಉಗಮ ಸುಮಾರು 220 ಮಿಲಿಯನ್ ವರ್ಷಗಳ ಹಿಂದೆ ಟ್ರಿಯಾಸಿಕ್ ಕಾಲಘಟ್ಟದಲ್ಲಿ ಆಗಿರಬಹುದೆಂಬ ಅಂದಾಜಿದೆ. ಪಳೆಯುಳಿಕೆಗಳ ಆಧಾರದ ಮೇಲೆ ಇವು ಅಂದಿನಿಂದ ಇಲ್ಲಿಯವರೆಗೆ ಇವುಗಳ ಶಾರೀರಿಕ ಗುಣಲಕ್ಷಣಗಳಲ್ಲಿ ಯಾವುದೇ ರೀತಿಯ ಭಿನ್ನತೆ ಕಂಡುಬಂದಿಲ್ಲ ಎಂದು ಹೇಳುತ್ತಾರೆ. ಉಳಿದ ಕೀಟಗಳಂತೆ ಮಿಡತೆಯ ದೇಹ ಕೂಡ ಮೂರು ಭಾಗಗಳಲ್ಲಿ ವಿಂಗಡಿಸಿದ್ದು, ದೊಡ್ಡದಾದ ತಲೆ, ಥೋರಾಕ್ಸ್ ಮತ್ತು ಹೊಟ್ಟೆ ಎಂಬ ಮೂರು ಭಾಗಗಳಿವೆ. ಇದರ ಹಿಂಗಾಲುಗಳು ಬಲಿಷ್ಠವಾಗಿದ್ದು ನೆಗೆಯಲು ಸಹಕಾರಿಯಾಗಿವೆ. ಹೆಣ್ಣು ಮಿಡತೆಗಳು ಗಂಡಿಗಿಂತ ದೊಡ್ಡದಾಗಿರುತ್ತವೆ. ಹೆಣ್ಣು ಮಿಡತೆಯ Ovipositor ಹೊಂದಿರುವ ಕಾರಣ ಇವುಗಳ ವರ್ಗಕ್ಕೆ ಕೈಲಿಫೆರಾ (Caelifera) (Caelifera ಎಂಬುದು ಲ್ಯಾಟಿನ್ ಶಬ್ದವಾಗಿದೆ. ಮಿಡತೆಯ ಬಲಿಷ್ಠವಾದ ಒವಿಪೋಸಿಟೋರ್ ಅಂದರೆ ಮೊಟ್ಟೆ ಇಡುವ ಅಂಗಾಂಶದ ಆಧಾರದ ಮೇಲೆ ಇದನ್ನು ವರ್ಗೀಕರಿಸಲಾಗಿದೆ. ಮಿಡತೆಯು ತನ್ನ ovipositor ನಿಂದ ನೆಲವನ್ನು ಅಗೆದು ಅದರಲ್ಲಿ ಮೊಟ್ಟೆಯ ಚೀಲವನ್ನು ಹುದುಗಿಸಿ ಇಡುತ್ತದೆ) ಎಂಬ ಹೆಸರು ಬಂದಿದೆ. ಮಿಡತೆಯು ತನ್ನ Ovipositor ನಿಂದ ನೆಲವನ್ನು ಅಗೆದು ಅದರಲ್ಲಿ ಮೊಟ್ಟೆಯ ಚೀಲವನ್ನು ಹುದುಗಿಸಿ ಇಡುತ್ತದೆ. ಒಂದು ಮೊಟ್ಟೆಯ ಚೀಲದಲ್ಲಿ ಸುಮಾರು 25 ರಿಂದ 100 ಮೊಟ್ಟೆಗಳಿರುತ್ತವೆ. ಮೊಟ್ಟೆ ಇಟ್ಟ ಎರಡು ವಾರಗಳ ಬಳಿಕ ಮರಿ ಹೊರಬರುತ್ತವೆ. ಇವುಗಳನ್ನು ನಿಂಪ್ (nymph) ಎನ್ನುತ್ತಾರೆ. ನಂತರ ನಾಲ್ಕರಿಂದ ಏಳು ವಾರಗಳವರೆಗೆ ಇವು ಆರೇಳು ಬಾರಿ ರೂಪಾಂತರ (moulting) ಹೊಂದುತ್ತವೆ. ನಂತರ ರೆಕ್ಕೆ ಮೂಡಿ ವಯಸ್ಕ ಮಿಡತೆಯಾಗಿ ಮಾರ್ಪಾಡಾಗುತ್ತವೆ.

© ದೀಕ್ಷಿತ್ ಕುಮಾರ್ ಪಿ.

© ಅನುಪಮಾ ಕೆ. ಬೆಣಚಿನಮರ್ಡಿ

© ದೀಕ್ಷಿತ್ ಕುಮಾರ್ ಪಿ.

ಸಾಮಾನ್ಯವಾಗಿ ಮಿಡತೆಯು ಏಕಾಂತ ವಾಸಿ (solitary). ಆದರೆ ಕೆಲವೊಮ್ಮೆ ಇವು ಗುಂಪುಗಳಲ್ಲಿ ಕೂಡಿ ಬೆಳೆಯ ಮೇಲೆ ಆಕ್ರಮಣ ಮಾಡುತ್ತವೆ. ಇದಕ್ಕೆ Swarms ಎನ್ನುತ್ತೇವೆ. ಹೀಗಾದಾಗ ಮಾತ್ರ ಇವುಗಳ ಸಂಖ್ಯೆಯನ್ನು ನಿಯಂತ್ರಿಸುವುದು ಒಂದು ದೊಡ್ಡ ತಲೆನೋವೇ. ಮಿಡತೆಯ ಜೀವಿತಾವಧಿ ಸುಮಾರು 12 ತಿಂಗಳು. ಈ ಜೀವಿತಾವಧಿಯಲ್ಲಿ ಒಂದು ಮಿಡತೆ ಲಕ್ಷಗಟ್ಟಲೆ ಮಿಡತೆಗಳು ಹುಟ್ಟುವುದಕ್ಕೆ ಕಾರಣವಾಗಿದ್ದರೂ, ಇವುಗಳು ಆಹಾರ ಸರಪಣಿಯಲ್ಲಿ ಮುಖ್ಯ ಪಾತ್ರ ವಹಿಸುವುದರಿಂದ ಇವುಗಳಿಂದ ಮಾನವರಿಗೆ ಯಾವುದೇ ಹಾನಿಯಾಗುವುದಿಲ್ಲ. ಪಕ್ಷಿ, ಕಪ್ಪೆ, ಹಲ್ಲಿ ಮತ್ತು ಇತರ ಸರಿಸೃಪಗಳಿಗೆ ಇದು ಮುಖ್ಯ ಆಹಾರವಾಗಿದೆ. ಹಾಗೆಯೇ ಇಂಡೋನೇಷ್ಯಾ ಮತ್ತು ಚೀನಾದಲ್ಲಿ ಮನುಷ್ಯರು ಕೂಡ, ಪ್ರೋಟೀನ್ ಆಕರಗಳಾದ ಈ ಮಿಡತೆಗಳನ್ನು ತಿನ್ನುತ್ತಾರಂತೆ. ನನ್ನ ಮಗನಿಗೆ ಎಷ್ಟು ಅರ್ಥವಾಯಿತೋ ಏನೋ ತಿಳಿಯದು ಒಟ್ಟಿನಲ್ಲಿ ಇಷ್ಟೂ ಮಾಹಿತಿಯನ್ನು ಸ್ವಲ್ಪ ಸ್ವಲ್ಪವೇ ತಿಳಿದುಕೊಂಡು, ಅವನಿಗೆ ತಿಳಿಸಿಹೇಳಲು ನನಗೆ ಹೆಚ್ಚು ಸಮಯವೇ ಬೇಕಾಯಿತು.

ಹೀಗೆ ನಮ್ಮ ಸುತ್ತಲಿರುವ ಎಷ್ಟೊಂದು ಜೀವಿಗಳ ಬಗ್ಗೆ, ಅದರಲ್ಲೂ ಕೀಟಗಳ ಬಗ್ಗೆ ಸಾಮಾನ್ಯ ಜನರಾದ ನಮಗೆ ಇರುವ ಮಾಹಿತಿ ಅಲ್ಪ ಎಂದರೆ ತಪ್ಪಾಗಲಾರದು. ಮುಂದಿನ ಸಂಚಿಕೆಯಲ್ಲಿ ಮತ್ತೊಂದು ಹೊಸ ಕೀಟದ ಕತೆಯೊಂದಿಗೆ ಭೇಟಿ ನೀಡೋಣ.

ಲೇಖನ: ಅನುಪಮಾ ಕೆ. ಬೆಣಚಿನಮರ್ಡಿ

ಬೆಂಗಳೂರು ನಗರ ಜಿಲ್ಲೆ

ಜಿಮ್ ಕಾರ್ಬೆಟ್ ಕಾಡಿನ ರೋಚಕ ಅನುಭವದ ಕಥನ ಭಾಗ ೨

ಪಕ್ಷಿ ಗಣತಿಯ ಮೊದಲನೇ ದಿನದ ರಾತ್ರಿ ತಡವಾಗಿ ಕ್ಯಾಂಪ್ ಗೆ ಬಂದು ಮಲಗಿದ್ದರೂ ಸಹ, ಮುಂಜಾನೆ ಬೆಳಗಾಗುವುದಕ್ಕೆ ಮುಂಚೆಯೇ ಎಚ್ಚರಾಗಿತ್ತು. ಹೊಸ ಪಕ್ಷಿಗಳನ್ನು ಕಂಡರೆ ಸಿಗುವ ಆನಂದ, ಹಿಮಾಲಯದ ತಪ್ಪಲಿನಲ್ಲೇ ಕಾಣಸಿಗುವ ಸ್ಥಳೀಯ ಪಕ್ಷಿಗಳ ಸೌಂದರ್ಯವು ನನ್ನನ್ನು ಹಾಸಿಗೆಯಿಂದ ಬಡಿದೆಬ್ಬಿಸಿತ್ತು. ಬೆಳಿಗ್ಗೆ 5.30ರ ಸಮಯಕ್ಕೆ ಬೆಳಕು ಹರಿದಿತ್ತು. ಬೆಳಿಗ್ಗೆ ಎದ್ದವನೇ ಹೊರಗಡೆ ಬಂದು ನೋಡಿದೆ. ನಾವು ತಂಗಿದ್ದ ಅರಣ್ಯ ಇಲಾಖೆಯ ಕ್ಯಾಂಪ್ ನ ಎದುರಿಗೆ ವಿಶಾಲವಾದ ಹಸಿರಿನ ಪ್ರದೇಶ, ಸುತ್ತಲೂ ಬೆಟ್ಟ ಗುಡ್ಡಗಳಿಂದ ಆವರಿಸಿದ ಕಾಡು, ಬಾನೆತ್ತರಕ್ಕೆ ಬೆಳೆದು ನಿಂತ ಮರಗಳು, ಹಕ್ಕಿಗಳ ಚಿಲಿಪಿಲಿ ನಿನಾದ ಎಲ್ಲವೂ ನನ್ನ ಮನಸೂರೆಗೊಳಿಸಿದವು.

ತಕ್ಷಣವೇ ಕ್ಯಾಂಪ್ ನ ಒಳಹೊಕ್ಕ ನಾನು, ಶುಚಿಯಾಗಿ ಕ್ಯಾಮೆರಾ ಸಮೇತ ಹೊರಗಡೆ ಬಂದೆ. ನಮ್ಮ ಕ್ಯಾಂಪ್ ನಲ್ಲಿದ್ದ ಅಮರ್ ಚಂದ್, "ಬೆಳಗಿನ ಉಪಾಹಾರಕ್ಕೆ ಚಪಾತಿ, ಪಲ್ಯ ತಯಾರು ಮಾಡ್ತೇನೆ, ಸಮಯವಿದ್ದರೆ ತಿನ್ಕೊಂಡು ಹೊರಡೋಣ, ಇಲ್ಲ ಬುತ್ತಿ ಕಟ್ಟಿಕೊಂಡು ಹೊರಡೋಣ." ಎಂದು ತಿಂಡಿ ತಯಾರಿಸಲು ಹೊರಟ. ಅಮರ್ ಚಂದ್, ಉತ್ತರಾಖಂಡ್ ರಾಜ್ಯದ ಅಪ್ಪಟ ದೇಸಿ ಹುಡುಗ; ಒಳ್ಳೆಯ ಅಡುಗೆ ಭಟ್ಟ. ನಾವು ಅಲ್ಲಿ ತಂಗಿದ್ದಷ್ಟು ದಿನವೂ ಸ್ವಾದಿಷ್ಟಕರವಾದ ಊಟ ಸಿಗಲು ಮೂಲ ಕಾರಣ ಇವನೇ. ಇವನ ಕೈ ಚಳಕ ಬರಿ ಪಾಕಶಾಸ್ತ್ರಕ್ಕೆ ಮಾತ್ರ ಸೀಮಿತವಾಗಿರದೆ ಪರಿಸರಶಾಸ್ತ್ರಕ್ಕೂ ಸಹ ಪಸರಿಸಿತ್ತು. ಇವನು ಪಕ್ಷಿಗಳ ಬಗ್ಗೆ, ಕಾಡಿನ ಬಗ್ಗೆ ಅಪಾರ ಜ್ಞಾನವನ್ನು ಹೊಂದಿದ್ದನು. ಇದು ನಮ್ಮ ಪಕ್ಷಿ ಗಣತಿಗೂ ಸಹ ತುಂಬಾ ನೆರವಾಯಿತು.

ಸ್ವಲ್ಪ ಸಮಯದಲ್ಲಿಯೇ ನನ್ನಂತೆಯೇ ಇನ್ನೂ ಕೆಲವರು ಪಕ್ಷಿ ವೀಕ್ಷಣೆಗೆಂದು ಸನ್ನದ್ಧರಾಗಿ ಕ್ಯಾಂಪ್ ಇಂದ ಹೊರಬಂದರು. ಅವರನ್ನು ಗಮನಿಸಿದ ನಾನು, ನಮ್ಮ ಪಕ್ಷಿ ಗಣತಿಯ ಕೆಲಸವನ್ನು ಇಲ್ಲಿಂದಲೇ ಶುರು ಮಾಡಬಹುದೆಂದು ಆಲೋಚಿಸಿ, ಕ್ಯಾಂಪಿಗೆ ಹೋಗಿ ಒಂದು ಕೈಯಲ್ಲಿ ಟೀ ಹಿಡ್ಕೊಂಡು, ಬೈನಾಕ್ಯುಲರ್ ಹೆಗಲಿಗೆ ಹಾಕಿಕೊಂಡು ಹೊರಬಂದು, ನಮ್ಮ ಕ್ಯಾಂಪ್ ನ ಆವರಣದಲ್ಲಿದ್ದ ಪಕ್ಷಿಗಳ ಚಲನ ವಲನ ಗಮನಿಸಿ ದಾಖಲಿಸುವುದಕ್ಕೆ ಅಣಿಯಾದೆ.

Oriental dollarbird, Callie's Pheasant, Grey-headed Woodpecker, red jungle Blue Whistling-Thrush, Greater Hornbill, paradise fly-catcher ಹೀಗೆ ಅನೇಕ ನೋಡಿರುವ ಮತ್ತು ನೋಡಿರದ ಪಕ್ಷಿಗಳು, ತುಂಬಾ ಹತ್ತಿರದಲ್ಲೇ ಹಾರಾಡುವುದನ್ನು ಕಂಡು ಖುಷಿಯಿಂದ ದಾಖಲಿಸತೊಡಗಿದೆವು.

ನನ್ನ ಪಕ್ಷಿ ವೀಕ್ಷಣೆ ದಕ್ಷಿಣ ಭಾರತದ ಪ್ರಾಂತ್ಯಕ್ಕಷ್ಟೇ ಸೀಮಿತವಾಗಿದ್ದರಿಂದ, ಇಲ್ಲಿನ ಪರಿಸರದ ಸ್ಥಳೀಯ ಪಕ್ಷಿಗಳು ಎಲ್ಲವೂ ಹೊಸತು.! ಆದ ಕಾರಣ ನನ್ನ ಕುತೂಹಲ, ಸಂತೋಷ, ಉದ್ವೇಗ ಏರುತ್ತಲೇ ಇತ್ತು. ನಾನು, ನನ್ನ ಸಹಚರ ಮುನೀಶ್ ಕಂಡ ಪಕ್ಷಿಗಳನ್ನೆಲ್ಲ ಗುರುತು ಮಾಡಿಕೊಳ್ಳುತ್ತಿದ್ದರು. ಅಷ್ಟರಲ್ಲಿ ನಮ್ಮ ಅಮರ್ 'ಪರೋಟ, ಚಪಾತಿ ರೆಡಿ ಇದೆ' ಎಂದು ಕೂಗಿ ಕರೆದ. ಸಮಯ ನೋಡಿದೆ, ಗಡಿಯಾರ 6.30 ತೋರಿಸುತ್ತಿತ್ತು. 'ಇಷ್ಟು ಬೇಗ ತಿನ್ನೋದ?' ಎಂದು ಯೋಚಿಸುತ್ತಿದ್ದೆ. ಅಷ್ಟರಲ್ಲಿ ಮುನೀಶ್ 'ನಮ್ಮ ಲಗೇಜ್ ಗಳೇ ಹೆಚ್ಚಿವೆ, ಅದರ ಜೊತೆ ತಿಂಡಿ ಹೊರುವುದು ಕಷ್ಟದ ಕೆಲಸ. ಇಲ್ಲಿಯೇ ತಿಂದು ಹೊರಡೋಣ.' ಎಂದ. ನನಗೂ ಅವನ ತರ್ಕ ಸರಿಯೆನ್ನಿಸಿ ಕ್ಯಾಮೆರಾ, ಬೈನಾಕ್ಯುಲರ್, ನೀರಿನ ಬಾಟಲ್, ಫೀಲ್ಡ್ ಗೈಡ್ ಎಲ್ಲವನ್ನು ತುಂಬಿಕೊಂಡು ಒಂದೆರಡು ಪರೋಟ ಅಲ್ಲೇ ತಿಂದು ಕಾಡಿನ ಕಡೆ ಹೊರಟೆವು.

ಮುಂಜಾನೆಯ ದಟ್ಟ ಮಂಜನ್ನು ಸೀಳಿ ಬರುತ್ತಿದ್ದ ಬೆಳಗಿನ ಎಳೆ ಬಿಸಿಲು, ತಂಪಾದ ಆಹ್ಲಾದಕರ ವಾತಾವರಣ, ಮಳೆಗಾಲದ ಮುಂಗಾರಿನ ದಿನಗಳು, ಕಿರಿದಾದ ಕಣಿವೆ, ಸಣ್ಣಗೆ ಹರಿಯುವ ಝರಿ, ಆ ಝರಿಗಳನ್ನೇ ದಾಟಿ ಸಾಗುತ್ತಿದ್ದ ನಮ್ಮ ಪಯಣ, ಜಿಂಕೆ, ಸಾರಂಗ ಮುಂತಾದ ಕಾಡು ಪ್ರಾಣಿಗಳ ದರ್ಶನ ಎಲ್ಲವೂ ಹೊಸ ಲೋಕವನ್ನೇ ಸೃಷ್ಟಿಸಿತ್ತು.

ನಮ್ಮ ಮಾರ್ಗದರ್ಶಕರಾಗಿ ಜೊತೆಯಲ್ಲಿ ಇಬ್ಬರು ಅರಣ್ಯ ರಕ್ಷಕರು ಮತ್ತು ವಲಯ ಅರಣ್ಯ ಅಧಿಕಾರಿಗಳು ಸಹ ಇದ್ದರು. ಅವರ ಮಾರ್ಗದರ್ಶನದಂತೆ ನಡೆಯುತ್ತಾ ನಾವು ಇಲ್ಲಿನ ಕಾಡು ಮತ್ತು ಪರಿಸರದ ಅವರ ಅನುಭವವನ್ನು,

ಇಲ್ಲಿ ಕಾಣಸಿಗುವ ಚಿಟ್ಟೆಗಳು, ಕಾಡಿನ ಮರ ಮತ್ತು ಗಿಡಗಳ ಪರಿಚಯ ಎಲ್ಲವನ್ನು ಕೇಳಿ ತಿಳಿಯುತ್ತ ಹಾಗೆಯೇ ಅವರ ಮಾತುಗಳನ್ನು ನನ್ನ ಫೋನ್ ನಲ್ಲಿ ರೆಕಾರ್ಡ್ ಮಾಡಿಕೊಳ್ಳುತ್ತಾ ಜಿಮ್ ಕಾರ್ಬೆಟ್ ಎನ್ನುವ ಸುಂದರ ಕಾಡಿನ ನೈಜ ಸೊಬಗನ್ನು ಸವಿಯುತ್ತಾ ಮುನ್ನಡೆಯುತ್ತಿದ್ದೆವು.

ನಮ್ಮ ಜೊತೆಗಾರ ಮುನೀಶ್ ರವರು ಯಾವುದೋ ಸುಂದರವಾದ ಅಪರೂಪದ ಪಕ್ಷಿಗಳ ಚಲನ ವಲನವನ್ನು ಕಂಡು ಪಕ್ಕದಲ್ಲಿಯೇ ಇದ್ದ ಕಡಿದಾದ ಕಣಿವೆ ಇಳಿದು ಅದನ್ನು ಹುಡುಕಿ ಹೊರಟರು. ನಾವೆಲ್ಲರೂ ಅವರನ್ನೇ ಹಿಂಬಾಲಿದೆವು. ಹಸಿರು, ಹಳದಿ ಮತ್ತು ಕಪ್ಪು ಬಣ್ಣದ ಸುಂದರ ಪಕ್ಷಿಯು ಕುಳಿತಿರುವುದನ್ನು ಕಂಡು ನಿಬ್ಬೆರಗಾದೆನು. ಅದರ ಹೆಸರು ಲಾಂಗ್ ಟೈಲ್ಡ್ ಬ್ರಾಡ್ ಬಿಲ್ (Long-tailed broadbill). ಪ್ರಪ್ರಥಮ ಬಾರಿ ಕಂಡ ಈ ಸುಂದರ ಪಕ್ಷಿಯ ಸುಂದರತೆಯನ್ನು ಕಂಡು ಸಂತೋಷದಲ್ಲಿ ಕೂಗಬೇಕೆನಿಸಿತು. ಆದರೆ ಹಾಗೆ ಮಾಡದೆ ಅದರ ಸೌಂದರ್ಯವನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿಯುತ್ತಾ, ತುಂಬಾ ಹತ್ತಿರದಲ್ಲಿಯೇ ಕುಳಿತಿದ್ದ ಅದರ ಚಟುವಟಿಕೆಯನ್ನು ನೋಡುತ್ತಾ, ಅದರ ಇಂಪಾದ ಕೂಗನ್ನು ಕೇಳುತ್ತಾ ಮೈಮರೆತು ಅಲ್ಲಿಯೇ ಸ್ವಲ್ಪ ಸಮಯ ಕಳೆದೆವು. ಹೀಗೆ ನವ ನವೀನ ಪಕ್ಷಿಗಳನ್ನು ನೋಡುತ್ತಾ, ಅವುಗಳ ಕೂಗನ್ನು ಆಲಿಸುತ್ತಾ, ಕ್ಯಾಮೆರಾದಲ್ಲಿ ಅವುಗಳನ್ನು ಸೆರೆಯಿಡಿಯುತ್ತ ಸರಿ ಸುಮಾರು ಎಂಟರಿಂದ ಹತ್ತು ಕಿಲೋ ಮೀಟರ್ ಕಾಡಿನ ಒಳ ಹೊಕ್ಕಿದ್ದೆವು.



ನಡೆದು ನಡೆದು ಸುಸ್ತಾಗಿದ್ದ ಎಲ್ಲರು ವಿರಮಿಸಲು ಯೋಚಿಸಿ, ತಣ್ಣನೆಯ ನೆರಳಿರುವ ಜಾಗವನ್ನು ಹುಡುಕಿ, ಜೊತೆಯಲ್ಲಿ ತಂದಿದ್ದ ಬಿಸ್ಕತ್ತು ಮತ್ತು ನೀರು ಕುಡಿಯುತ್ತ ಕುಳಿತೆವು. ನಮ್ಮ ಜೊತೆ ಬಂದಿದ್ದ ಫಾರೆಸ್ಟ್ ಗಾರ್ಡ್, "ಸಾರ್ ಅಲ್ಲೇ ನನಗೆ ಎರಡು ವರ್ಷದ ಕೆಳಗೆ ಹುಲಿ ದಾಳಿ ಮಾಡಿದ್ದು." ಎಂದು ಪಕ್ಕದಲ್ಲಿನ ಒಂದು ಜಾಗದ ಬಳಿ ಕೈ ತೋರಿಸಿದ. ನೀರು ಕುಡಿಯುತ್ತಿದ್ದ ನಾನು ತಟ್ಟನೆ ನಿಲ್ಲಿಸಿ ಆತನ ಕಡೆ ಮುಖ ಮಾಡಿದೆ. ನನ್ನಷ್ಟೇ ನನ್ನ ಜೊತೆಗಾರರೆಲ್ಲರೂ ಗಾಬರಿಗೊಂಡಿದ್ದರು. ಅವನು ತಮಾಷೆ ಮಾಡುತ್ತಿರಬಹುದೇ ಎಂದು ತಿಳಿಯಲು ನಾನು ಅವನ ಪಕ್ಕ ಹೋಗಿ ಕುಳಿತು ನಿಧಾನವಾಗಿ "ಏನು?" ಎಂದು ಕೇಳಿದೆ.

ಅವನು ಮತ್ತೊಮ್ಮೆ ಅದೇ ಜಾಗದ ಕಡೆ ಕೈ ತೋರಿಸಿ, "ಸಾರ್ ಅಲ್ಲಿ ನೋಡಿ ಅದೇ ಜಾಗ... ಅಲ್ಲಿ ಗುಡ್ಡದ ಮೇಲೆ ಕಾಣುತ್ತ ಇದೆ ಅಲ್ವ ಅದೇ ಜಾಗ ಸಾರ್... ನಾವೆಲ್ಲಾ ಒಟ್ಟಿಗೆ ಬೀಟ್ ಗೆ ಬಂದಿದ್ದೆವು. ನಮ್ಮ ಪಾಡಿಗೆ ನಾವು ಮಾತನಾಡುತ್ತ ಸಾಗುತ್ತ ಇದ್ದಾಗ ಅದೆಲ್ಲಿತ್ತೋ ಹುಲಿ ಎದುರು ಗಡೆಯಿಂದ ಬಂದದ್ದೇ ನೇರವಾಗಿ ನಮ್ಮ ಮೇಲೆ ಎಗರಿತು ಸಾರ್. ನಾನು ನನ್ನ ಕೈಲಿದ್ದ ಕೋಲನ್ನು ಅಡ್ಡಲಾಗಿ ಹಿಡಿದು ಅದನ್ನು ತಳ್ಳಲು ಯತ್ನಿಸಿದೆ. ನಮ್ಮ ಬಳಿ ಬಂದೂಕು, ಕೋವಿ ಎಲ್ಲವೂ ಇದ್ದರು ಏನು ಮಾಡಲು ಆಗಲಿಲ್ಲ. ಅದು ಯಾವ ಮಾಯೆಯಲ್ಲಿ ಬಂತೋ ಸಾರ್... ಬಂದಿದ್ದೆ ನನ್ನನ್ನು ಟಾರ್ಗೆಟ್ ಮಾಡಿತು." ಎಂದವನೆ ಅವನ ಫೋನ್ ನಲ್ಲಿ ಇದ್ದ ಹುಲಿ ದಾಳಿಯ ಫೋಟೋ ತೋರಿಸುತ್ತಾ ತನ್ನ ಮಾತು ಮುಂದುವರಿಸಿದ. ಹಾಗೆ ಹೇಳುವಾಗ ಆ ದಿನದ ಆ ಭಯಾನಕ ದೃಶ್ಯ ಅವನ ಕಣ್ಣ ಮುಂದೆ ಬಂದಿರಬೇಕು. ಆ ಎದರಿಕೆ ಅವನ ಮುಖದಲ್ಲಿ ಕಾಣುತ್ತಿತ್ತು. ಮುಂದುವರಿಸುತ್ತಾ "ಆಮೇಲೆ ನಮ್ಮ ಜೊತೆ ಇದ್ದ ಐದು ಜನ ಕೋಲು ಕಟ್ಟಿಗೆ ಇಂದ ಜೋರಾಗಿ ಗಲಾಟೆ ಮಾಡಿ ಅದರ ಮೇಲೆ ಎರಗಿದರು ಸಾರ್. ಅಷ್ಟರಲ್ಲಿ ನನ್ನ ತಲೆ ಮತ್ತು ಭುಜಕ್ಕೆ ಅ ಹುಲಿ ತನ್ನ ಪಂಜಾ ಇಂದ ಹೊಡೆದು ಗಾಯ ಮಾಡಿತ್ತು! ಅಷ್ಟೇ ಸಾರ್ ನನಗೆ ಗೊತ್ತಾಗಿದ್ದು. ಮುಂದೇನಾಯಿತೋ ತಿಳಿಯದು ಎಚ್ಚರವಾದಾಗ ಆಸ್ಪತ್ರೆಯಲ್ಲಿ ಇದ್ದೆ. ಇಲ್ಲಿ ಹುಲಿಗಳು ತುಂಬಾ ಭಯಂಕರ, ಖತರ್ನಾಕ್ ಸರ್... ಯಾವಾಗ ಹೇಗೆ ಬಂದು ಮೇಲೆ ಎರಗುತ್ತವೋ ಗೊತ್ತಾಗೋದೇ ಇಲ್ಲ" ಎಂದ.

ಅಷ್ಟರಲ್ಲಿ ಪಕ್ಕದಲ್ಲೇ ಇದ್ದ ಅವನ ಸಹೋದ್ಯೋಗಿ ಮುಂದುವರಿಸುವಂತೆ "ನಾನೇ ರೋಡ್ ತನಕ ಇವನನ್ನು ಹೆಗಲ ಮೇಲೆ ಹಾಕಿಕೊಂಡು ಏಳು ಎಂಟು ಕಿಲೋಮೀಟರ್ ತನಕ ಎತ್ಕೊಂಡ್ ಹೋಗಿ ಹಾಸ್ಪಿಟಲ್ ಗೆ ಸೇರಿಸಿದೆ ಸಾರ್. ಆಸ್ಪತ್ರೆ ಕೂಡ ಇಲ್ಲಿಂದ ಮೂವತ್ತು ಕಿಲೋಮೀಟರ್ ದೂರದ ಒಂದು ಊರಿನಲ್ಲಿ ಇರೋದು." ಎಂದ. "ಹೆಂಗೋ ಬಚಾವ್ ಆದ ಇವನು ನನ್ನಿಂದ!" ಅಂತ ಅವನನ್ನು ಛೇಡಿಸುತ್ತಿದ್ದ.

ಮೋಹನ್ ದಾಸ್ (ಹೆಸರು ಬದಲಿಸಲಾಗಿದೆ), ಹುಲಿ ಅಟ್ಯಾಕ್ ಮಾಡಿದ ರಕ್ತ ಸಿಕ್ತ ಫೋಟೋವನ್ನು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಫೋಟೋ ವನ್ನು ತೋರಿಸಿದ. ಇದನ್ನು ನೋಡಿದ ನಮಗೆ ತಲೆಯಲ್ಲಿನ ಕೂದಲು ನಿಮಿರಿದವು, ಕೈ ಬೆವರಲು ಶುರುವಾಯಿತು, ಕಾಲುಗಳು ತಂತಾನೆ ನಡುಗಲು ಶುರುವಾದವು. ನಾನು ಅಳಕು ಧ್ವನಿಯಲ್ಲೆ, "ಅಲ್ಲಪ್ಪ ಇಷ್ಟೆಲ್ಲಾ ಇದ್ರು ನಮ್ಮನ್ನ ಈ ಪ್ರದೇಶಕ್ಕೆ ಕರ್ಕೊಂಡ್ ಬಂದಿದೀರಲ್ಲ, ಸರೀನಾ?" ಎಂದು ಅರಣ್ಯ ಇಲಾಖೆಯವರನ್ನು ಪ್ರಶ್ನಿಸಿದೆ. ಅದಕ್ಕೆ ಒಬ್ಬ ಉತ್ತರವಾಗಿ, "ನಾವು ಪ್ರತೀ ದಿನ ಓಡಾಡಲ್ವಾ ಸರ್... ಹುಷಾರಾಗಿ ಇರಬೇಕು ಅಷ್ಟೇ. ಅವತ್ತು ಏನೋ ನಮ್ಮ ಗ್ರಹಚಾರ ಸರಿ ಇರಲಿಲ್ಲ ಎನಿಸುತ್ತೆ! " ಎಂದ. ಆದರೆ ಅವನ ಮಾತು ನಮಗೆ ಸಮಾಧಾನ ತರಿಸಲಿಲ್ಲ.

© ಗುರು ಪ್ರಸಾದ್ ಕೆ. ಆರ್.

ಗುಂಪಿನ ಎಲ್ಲರು ವಾಪಸ್ ಹೋಗಲು ತಯಾರಾದೆವು ಹಾಗೂ ಆ ಅರಣ್ಯ ಸಿಬ್ಬಂದಿಯನ್ನು ಬೇಗ ನಮ್ಮನ್ನು ಕ್ಯಾಂಪ್ ಗೆ ಕರೆದುಕೊಂಡು ಹೋಗಲು ಕೇಳಿಕೊಂಡೆವು. ನಮ್ಮ ಭಯವನ್ನು ಅರಿತ ಅವರು ಅಡ್ಡ ರಸ್ತೆಯಲ್ಲಿ ತುಂಬಾ ಬೇಗನೆ ಕ್ಯಾಂಪ್ ನ ಬಳಿಗೆ ಕರೆತಂದರು. ಬರುವಾಗ ಪಕ್ಷಿ, ಪ್ರಾಣಿ, ಗಿಡ, ಮರ ಎಲ್ಲವನ್ನೂ ಮರೆತಿದ್ದೆವು. ಬರಿ ಹುಲಿ ಮಾತ್ರ ತಲೆಯಲ್ಲಿ ತುಂಬಿತ್ತು.

ಅರಣ್ಯ ಇಲಾಖೆಯವರ ಒಡನಾಟದಲ್ಲಿ ನಾನು ಅರಿತ ವಿಷಯವೆಂದರೆ ಮೇಲ್ನೋಟಕ್ಕೆ ಅವರ ಕೆಲಸ ಕಾಡಿನಂತೆ ಬಲು ಸುಂದರ, ರೋಚಕ, ಕುತೂಹಲಕರ ಎನಿಸಿದರೂ ಯಾವ ಕ್ಷಣದಲ್ಲಿ ಬೇಕಾದರೂ ಜೀವಕ್ಕೆ ಆಪತ್ತಾಗಬಹುದು ಎಂಬುದು. ಅವರ ಸೇವೆಗೆ ನಾವು ಪ್ರತಿಯಾಗಿ ಏನು ನೀಡಿದರೂ ಸಾಲದು ಅವರು ಸಂಬಳಕ್ಕೆ ಕೆಲಸ ಮಾಡುತ್ತಿದ್ದರು ಎಲ್ಲಾ ಮಾನವ ಕುಲಕ್ಕೂ, ಸಕಲ ಜೀವಿಗಳಿಗೂ ಅವಶ್ಯವಿರುವ ಕಾಡಿನ ಸಂಪತ್ತನ್ನು ರಕ್ಷಿಸುವ ಹೊಣೆ ಹೊತ್ತಿದ್ದಾರೆ. ಅವರನ್ನು **‘ಹಸಿರು ಯೋಧರು’** ಎನ್ನುವುದರಲ್ಲಿ ಯಾವುದೇ ತಪ್ಪಿಲ್ಲ ಎಂಬುದು ಈ ಘಟನೆಯಿಂದ ಇನ್ನಷ್ಟು ಸ್ಪಷ್ಟವಾಯಿತು ನನಗೆ.

© ಗುರು ಪ್ರಸಾದ್ ಕೆ. ಆರ್.

ಕ್ಯಾಂಪ್ ಗೆ ವಾಪಾಸ್ ಬಂದ ಎಲ್ಲರೂ ಊಟ ಮಾಡಿ ವಿರಮಿಸಿ ಆ ಕಥೆಯಿಂದ ಸಾವರಿಸಿಕೊಂಡೆವು. ಸಂಜೆಯ ಸಮಯದಲ್ಲಿ ಮತ್ತೊಮ್ಮೆ ಇನ್ನೊಂದು ದಾರಿಯಲ್ಲಿ ನಾವು ಪಕ್ಷಿ ಗಣತಿಗೆ ಹೋಗಬೇಕಿತ್ತು. ಎಲ್ಲರೂ ಎದರಿದ್ದ ಕಾರಣ ಮುಖ್ಯ ರಸ್ತೆಯ ಸಮೀಪದಲ್ಲಿನ ಕಾಲು ದಾರಿಯಲ್ಲೇ ಕರೆದುಕೊಂಡು ಹೋಗುವಂತೆ ಅರಣ್ಯ ಸಿಬ್ಬಂದಿಯನ್ನು ಕೇಳಿಕೊಂಡೆವು ನಮ್ಮ ಭದ್ರತೆಯೇ ಅವರ ಕರ್ತವ್ಯವಾದ ಕಾರಣ ಮತ್ತು ನಮ್ಮ ಆ ದಿನದ ಮನಸ್ಥಿತಿಯನ್ನು ಅರಿತಿದ್ದ ಅವರು ತಮ್ಮ ಯೋಜನೆಯನ್ನು ಬದಲಿಸಿ ನಾವು ಹೇಳಿದಂತೆಯೇ ಮಾಡಿದರು. ಮುಂದಿನ ದಿನದ ಅನುಭವವನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

ಮುಂದುವರಿಯುವುದು...

ಲೇಖನ: ಗುರು ಪ್ರಸಾದ್ ಕೆ. ಆರ್.

ಬೆಂಗಳೂರು ನಗರ ಜಿಲ್ಲೆ

ವಿವಿ ಅಂಕಣ

ಚೋರ ಜೇಡದ ವಿಚಾರ!

ಮನುಷ್ಯ ಯಾವುದಾದರು ರೀತಿಯಲ್ಲಿ ತೃಪ್ತಿಪಡಬಹುದು, ಎಂದಾದರೆ ಅದು "ಆಹಾರ"ದಲ್ಲಿ ಮಾತ್ರ. ಹೌದು ಹಸಿದಾಗ ರುಚಿಯು ಪ್ರಾಮುಖ್ಯ ಹೀನದಂತೆ ಇರುತ್ತದೆ. ಅದೇ ಸ್ವಲ್ಪ ಹೊಟ್ಟೆ ತುಂಬಿದ್ದರೆ, ರುಚಿಯಾಗಿದೆಯಾ? ಎಂಬ ಪ್ರಶ್ನೆಗಳ ಮೂಲಕ ಆಹಾರದ ರುಚಿಯ ಪ್ರಾಮುಖ್ಯತೆ ಬದಲಾಗುತ್ತದೆ. ಅದೇ.. ಒಮ್ಮೆ ಹೊಟ್ಟೆ ತುಂಬಿತೆಂದರೆ ಅದೆಂಥಾ ರುಚಿಯ ನಳಪಾಕವಾದರೂ ಅದಕ್ಕೆ ಯಾವುದೇ ಬೆಲೆ ಇರುವುದಿಲ್ಲ. ಮೃಷ್ಟಾನ್ನ ಭೋಜನದ ಮುಂದೆ ಕೂರಿಸಿದರೂ ಕೈ ಮತ್ತು ಬಾಯಿ ಸಂವಹಿಸುವುದಿಲ್ಲ. ಉಚಿತವಾಗಿ ಅಥವಾ ವಾಸ್ತವದಲ್ಲಿ ಉಚಿತವಾಗಿ ಸಿಗುತ್ತಿರುವ ನೀರು, ಗಾಳಿಯನ್ನು ಬಿಟ್ಟರೆ ಮನುಷ್ಯ ಅಥವಾ ಯಾವುದೇ ಜೀವಿಯಾದರೂ ಈ ಜೀವ ಗ್ರಹದಲ್ಲಿ ಬದುಕಲು ಶ್ರಮ ಪಡಬೇಕಾದದ್ದು 'ಆಹಾರಕ್ಕಾಗಿ' ಮಾತ್ರ. ಪ್ರತಿಯೊಂದು ಜೀವಿಯೂ ಆಹಾರಕ್ಕಾಗಿ ಇನ್ನೊಂದರ ಮೇಲೆ ಅವಲಂಬಿಸಿರಲೇ ಬೇಕು. ಆ ಅವಲಂಬನೆ ಸಸ್ಯಾಹಾರಿಗಳಿಗೆ ಸಸ್ಯಗಳ ಮೇಲೆ ಇರುತ್ತದೆ, ಮಾಂಸಾಹಾರಿಗಳಿಗೆ ಇನ್ನೊಂದು ಪ್ರಾಣಿಯ ಮೇಲಿರುತ್ತದೆ. ಬಹುಪಾಲು ಜೀವಿಗಳು ತಮ್ಮ ಆಹಾರವನ್ನಾಗಿ ಬೇರೆ ಪ್ರಭೇದದ ಜೀವಿಗಳ ಮೇಲೆ ಅವಲಂಬಿಸಿರುತ್ತವೆ. ಆದರೆ ಕೆಲವೊಮ್ಮೆ ಅಥವಾ ಕೆಲವು ಪ್ರಭೇದದ ಜೀವಿಗಳು

ಮಾತ್ರ ತಮ್ಮ ಪ್ರಭೇದದ ಜೀವಿಗಳನ್ನೇ ಆಹಾರವನ್ನಾಗಿ ಸೇವಿಸುತ್ತವೆ. ಇದನ್ನು ಸ್ವಜಾತಿ ಭಕ್ಷಣೆ ಮತ್ತು ಅವುಗಳನ್ನು ಸ್ವಜಾತಿ ಭಕ್ಷಕಗಳೆನ್ನುತ್ತಾರೆ. ಉದಾಹರಣೆಗೆ; ಸಾಮಾನ್ಯವಾಗಿ ಹಾವುಗಳ ಆಹಾರ ಇಲಿಯೋ, ಕಪ್ಪೆಯೋ ಆಗಿರುತ್ತದೆ, ಅಥವಾ ಇನ್ಯಾವುದೋ ಜೀವಿ ಇರಬಹುದು. ಆದರೆ ಕಾಳಿಂಗ ಸರ್ಪಕ್ಕೆ ಕೆಲವೊಮ್ಮೆ ಆಹಾರ ಇನ್ನೊಂದು ಕಾಳಿಂಗ ಸರ್ಪವೇ ಆಗಿರುತ್ತದೆ. ಇದನ್ನೇ ಸ್ವಜಾತಿ ಭಕ್ಷಣೆ *(cannibalism)* ಎನ್ನುತ್ತಾರೆ. ಈ ರೀತಿಯ ಸ್ವಜಾತಿ ಭಕ್ಷಣೆ ಬಗ್ಗೆ ಸುಮಾರು ಜೀವಿಗಳಲ್ಲಿ ಕೇಳಿರಬಹುದಾದರೂ ಜೇಡಗಳಲ್ಲಿ ಇವು ಕೊಂಚ ವಿಶೇಷವೆಂದೇ ಹೇಳಬಹುದು. ಏಕೆಂದರೆ ರಾತ್ರಿಯೆಲ್ಲಾ ಬಲೆ ಹೆಣೆದು, ತಾಳ್ಮೆಯಿಂದ ಕಾದು ಕುಳಿತು ಆಹಾರ ಕೀಟ ಬಂದು ಬಲೆಯೊಳಗೆ ಸಿಲುಕಿದ ನಂತರ ಹೋಗಿ ತಿನ್ನುತ್ತದೆ. ಆದರೆ ಪೈರೇಟ್ ಅಥವಾ ಚೋರ ಜೇಡಗಳು ಎಂದು ಕರೆಯಲ್ಪಡುವ ಕುಟುಂಬಕ್ಕೆ ಸೇರಿದ ಜೇಡಗಳು ಮಾತ್ರ ತನ್ನ ಬೇಟೆಗೆ ಜೇಡರಬಲೆಗಳನ್ನು ಹೇಣೆಯದೇ ತಂತ್ರ-ಕುತಂತ್ರಗಳಿಂದ ಕೂಡಿದ ಆಲೋಚನೆಗಳನ್ನು ಹೆಣೆಯುತ್ತವೆ...

ಅದು ಹೇಗೆ? ಅದೇ ಹೇಳಲು ಬಂದೆ, ಸ್ವಜಾತಿ ಭಕ್ಷಕ ಜೇಡಗಳು ಬೇರೆ ಜೇಡಗಳ ಬಲೆಗೆ ಹೋಗಿ ಹೇಗೆ ಆ ಬಲೆಯನ್ನು ಅಲುಗಾಡಿಸುತ್ತವೆ ಎಂದರೆ, ಬಲೆ ಮಾಲಿಕ ಜೇಡ ಯಾವುದೋ ಆಹಾರ ಕೀಟ ಮನೆ ಬಾಗಿಲು ತಟ್ಟುತ್ತಿದೆ ಎಂದು ಭಾವಿಸಿ ಅಲ್ಲಿಗೆ ಧಾವಿಸುತ್ತದೆ. ಆಗ ಈ ಚೋರ ಜೇಡ ಅದನ್ನೇ ಕಬಳಿಸಿಬಿಡುತ್ತದೆ. ಅಷ್ಟೇ ಅಲ್ಲ. ಕೆಲವೊಮ್ಮೆ ಈ ಚೋರ ಜೇಡಗಳು ಬೇರೆ ಜೇಡಗಳ ಬಲೆಯ ಮೇಲೆ ನಿಂತು ಸಂಗಾತಿಯನ್ನು ಸೆಳೆಯುವಾಗ ಮಾಡುವ ನೃತ್ಯವನ್ನೇ ಅಣುಕಿಸುತ್ತವೆ. ಬಂದಿರುವುದು ನಿಜವಾದ ಸಂಗಾತಿ ಜೇಡವಿರಬಹುದು ಎಂದು ಹತ್ತಿರ ಹೋಗುವ ಬಲೆಯ ಮಾಲಿಕ ಜೇಡವು ಈ ಜೇಡಗಳಿಗೆ ಆಹಾರವಾಗುತ್ತವೆ. ಇಂತಹುದೊಂದು ಪ್ರಕ್ರಿಯೆ ನಡೆಯುತ್ತಿದೆ ಎಂದು ಕೇಳುವುದೇ ಅಚ್ಚರಿಯೆನಿಸುತ್ತದೆ. ಇಂತಹುದರಲ್ಲಿ *ಜಿ.ಸಿಕಿರ್ರೆಸ್(G.siquirres)* ಎಂಬ ಪ್ರಭೇದದ ಜೇಡ ಬೇರೆ ಸ್ವಜಾತಿ ಭಕ್ಷಕ ಜೇಡಗಳಂತೆ ಆಹಾರ ಜೇಡದ ಬಲೆಗೆ ಹೋಗದೇ ಜೇಡಗಳೇ ತನ್ನ ಬಲೆಗೆ ಬಂದು ಬೀಳುವ ಹಾಗೆ ಮಾಡುತ್ತವೆ. ಇದಲ್ಲವೇ ಗಮ್ಮತ್ತು!

ಆರ್ಬ್ ವೀವರ್(orb weaver) ಎಂಬ ಪ್ರಭೇದದ ಜೇಡಗಳು ಬಲೆ ಹೆಣೆಯುವ ಬಗೆ ವಿಶೇಷ. ಏಕೆಂದರೆ ಬೇರೆ ಬಹುತೇಕ ಜೇಡಗಳಂತೆ ಈ ಜೇಡಗಳು ಒಂದು ಮರದ ಕೊಂಬೆಯ ತುದಿಯಲ್ಲಿ ಕುಳಿತು ಮೊದಲು ಒಂದೇ ಒಂದು ಬಲೆಯ ಎಳೆಯನ್ನು ತನ್ನಿಂದ ಬೇರ್ಪಡಿಸದೇ ಸ್ವತಂತ್ರವಾಗಿ ಗಾಳಿಗೆ ಬಿಡುತ್ತದೆ. ಗಾಳಿಯಲ್ಲಿ ತೇಲುತ್ತಾ ಬೆಳೆಯುತ್ತಾ ಹೋಗುವ ಆ ಎಳೆ ಯಾವಾಗ ಬೇರೊಂದು ಮರದ ರೆಂಬೆಯನ್ನು ತಾಗುತ್ತದೋ ಆಗ ಅಂಟಿಕೊಳ್ಳುತ್ತದೆ. ತದನಂತರ ಆ ಎಳೆಯನ್ನೇ ಅಡಿಪಾಯವನ್ನಾಗಿಸಿಕೊಂಡು ಈ ಜೇಡಗಳು ತಮ್ಮ ಬಲೆಯನ್ನು ಕಟ್ಟುತ್ತವೆ. ಇದನ್ನರಿತ *ಜಿ.ಸಿಕಿರ್ರೆಸ್ (G.siquirres)* ಜೇಡಗಳು ತಾವೂ ಒಂದು ಮರದ ಕೊಂಬೆಯ ತುದಿಯಲ್ಲಿ ಕುಳಿತು ಅದೇ ರೀತಿ ಕತ್ತರಿಸದ ನಿರಂತರ ಸ್ವತಂತ್ರ ಜೇಡರ ಬಲೆಯ ಒಂದು ಎಳೆಯನ್ನು ಬಿಟ್ಟಿರುತ್ತದೆ. ಯಾವಾಗ ಅದು ಈ *ಆರ್ಬ್ ವೀವರ್(orb weaver)* ಎಳೆಗೆ ತಾಗುತ್ತದೋ ಆಗ ಸಾಮಾನ್ಯವಾಗಿ ಅಂಟಿಕೊಳ್ಳುತ್ತದೆ. ಈ ಕುತಂತ್ರ ಅರಿಯದ *ಆರ್ಬ್ ವೀವರ್(orb weaver)* ಜೇಡ ತನ್ನ ಎಳೆಯು ಇನ್ನೊಂದು ಮರದ ಕೊಂಬೆಗೆ ಸಿಕ್ಕಿಹಾಕಿಕೊಂಡಿದೆ ಎಂದು ಭಾವಿಸಿ, ಆ ಎಳೆಯನ್ನು ಭದ್ರಪಡಿಸಲು ತನ್ನ ಎಳೆಯ ಮೇಲೆ ಪ್ರಯಾಣ ಪ್ರಾರಂಭಿಸುತ್ತದೆ. ಇನ್ನೊಂದು ಕೊನೆಯಲ್ಲಿ ಅಡಗಿ ಕುಳಿತಿರುವ ಈ ಚೋರ *ಜಿ.ಸಿಕಿರ್ರೆಸ್(G.siquirres)* ಜೇಡ ಸೀದಾ ತನ್ನ ಬೇಟೆ ಜೇಡವಾದ *ಆರ್ಬ್ ವೀವರ್(orb weaver)* ಜೇಡದ ಕಡೆಗೆ ಧಾವಿಸುತ್ತದೆ. "ಮೊದಲಿಗೆ ಇದು ಎರಡು ಜೇಡಗಳ ನಡುವಿನ ಸಂಘರ್ಷ ಎಂದು ನಾನು ತಿಳಿದಿದ್ದೆ. ಆದರೆ ಕೊನೆಗೆ ಚೋರ ಜೇಡ ಇನ್ನೊಂದನ್ನು ತಿಂದೇ ಬಿಡ್ತು". ಎನ್ನುತ್ತಾರೆ ಇಂತಹುದೊಂದು ಅಚ್ಚರಿ ಹಾಗೂ ಅಪರೂಪದ ದೃಶ್ಯವನ್ನು ಕಂಡ ಜೇಡಗಳ ಸಂಶೋಧನಾ ವಿಜ್ಞಾನಿಗಳ ತಂಡ. ಈ ದೃಶ್ಯ ಬಲು ಅಪರೂಪ ಏಕೆಂದರೆ, *ಜಿ.ಸಿಕಿರ್ರೆಸ್(G.siquirres)* ಜೇಡಗಳನ್ನು ಜೀವಂತವಾಗಿ ಕಂಡವರೇ ಇಲ್ಲ. ಹೌದು 1994ರಲ್ಲಿ ದೊರೆತ ಸತ್ತ ಜೇಡದಿಂದಲೇ ಈ ಜೇಡ ಪರಿಚಯವಾಗಿದ್ದು. ಅದಾದ ನಂತರ ಇದನ್ನು ಹೀಗೆ ಈ ಸಂದರ್ಭದಲ್ಲಿ ಕಂಡದ್ದು ಅದೃಷ್ಟವೇ ಸರಿ.

ವಿಜ್ಞಾನಿಗಳೆಂದರೆ ಕೇವಲ ಪ್ರಯೋಗಾಲಯಗಳಲ್ಲಿ ನಾಲ್ಕು ಗೋಡೆಗಳ ಮಧ್ಯೆ ಕುಳಿತು ಅವಿರತವಾಗಿ ಇಲ್ಲದ್ದನ್ನು ಹುಡುಕುವ-ಸೃಷ್ಟಿಸುವ ಹುಚ್ಚರಂತೆ ಊಹಿಸಿಕೊಳ್ಳುವ ನಾವು ಅರಿಯಬೇಕಾದದ್ದು ಇದು. ಆಸಕ್ತಿಯನ್ನೇ ಇಂಧನವಾಗಿಸಿಕೊಂಡು ಹೊಸತನ್ನು ಹುಡುಕುವ ಹಂಬಲದ ಜೊತೆ ನಮ್ಮದೇ ಹಿತ್ತಲಿನಿಂದ ಹಿಡಿದು ಖಂಡಗಳನ್ನು ದಾಟಿ ಹೋಗಿ ಹೊರಗಿನ ಪ್ರಪಂಚದಲ್ಲಿ ಈಗಾಗಲೇ ಇರುವ ಅಚ್ಚರಿಗಳನ್ನು ಗಮನಿಸಿ ಅನುಭವಿಸಲು ತಯಾರಿರುವ ಹಾಗೂ ಈಗಾಗಲೇ ಇಳಿದಿರುವ ಎಲ್ಲರೂ ವಿಜ್ಞಾನಿಗಳೇ!

ಮೂಲ ಲೇಖನ: www.snexplores.org



ಲೇಖನ: ಜೈಕುಮಾರ್ ಆರ್.
ಡಬ್ಲ್ಯೂ. ಸಿ. ಜಿ. ಬೆಂಗಳೂರು ನಗರ ಜಿಲ್ಲೆ

ಚಿಟ್ಟೆ

ಬಂದೆ ನಾ, ನಿನ್ನ ಬೆನ್ನ ಹತ್ತಿ,
ಓಡುತಿರುವೆ ನೀನೆಲ್ಲಿ ಓ ಪಾತರಗಿತ್ತಿ?
ನೋಡಿದೆ ನಿನ್ನ ನಾ ತಲೆಯೆತ್ತಿ,
ಹೊರಟೆ ನೀನೆಲ್ಲಿ ನಿನ್ನ ಬಣ್ಣವ ನನ್ನ ಕೈಗೆ ಮೆತ್ತಿ.

ಮುತ್ತಿನಂತೆ ಪೋಣಿಸಿದೆ ನೀನಿಟ್ಟ ಮೊಟ್ಟೆ.
ಅದರೊಳಗೆ ಸೋಜಿಗವ ನೀ ಅಡಗಿಸಿ ಇಟ್ಟೆ,
ಕವಚದಿಂದ ಹೊರಬಂತೆ ಇನ್ನೊಂದು ಚಿಟ್ಟೆ?
ಅಚ್ಚರಿಯಿಂದ ನಾ, ಅದನೇ ನೋಡುತ್ತಾ ನಿಂತು ಬಿಟ್ಟೆ.

ಕಂಬಳಿ ಹುಳುವಾಗಿ ನೀ ಹೊರಬರುವೆ,
ರೂಪಪರಿವರ್ತನೆ ಹೊಂದಿ ಚಿಟ್ಟೆಯಾಗಿ ಬಿಡುವೆ,
ಬಣ್ಣ ಬಣ್ಣದಿ ಕಂಡು ನಿನ್ನ ಹಿಡಿವ ಆಸೆ ತಂದಿರುವೆ,
ಹಿಡಿಯಲಾಗದೆ ನಿನ್ನ, ನಾ ಸೋತು ಸೊರಗಿರುವೆ.

ಪ್ರಕೃತಿಯ ಸೊಬಗಿಗೆ ನೀನೊಂದು ಮೆರುಗು,
ಪರಾಗಸ್ಪರ್ಶದಿ ನಿನ್ನ ಕೊಡುಗೆ ಮೂಡಿಸಿದೆ ಬೆರಗು,
ಬರುವೆ ನಾ ನಿನ್ನೊಡನೆ, ನನಗೂ ಕೊಡು ಮಕರಂದ,
ನಿನ್ನಂತೆ ನಾ ಸವಿಯುವೆ ಜೀವನದ ಆನಂದ.!.

- ದೀಪಿಕಾ ಬಾಯಿ
ಬೆಂಗಳೂರು ನಗರ ಜಿಲ್ಲೆ

© ಅನು

ಪ್ರಕೃತಿ ಬಿಂಬ

ಕೆಂಬೂತ © **ದೀಪಕ್ ಎಲ್. ಎಂ.**

ಭಾರತೀಯ ಉಪಖಂಡ ಮತ್ತು ಆಗ್ನೇಯ ಏಷ್ಯಾದ ಕಾಡುಗಳು, ಹುಲ್ಲುಗಾವಲುಗಳು, ತೋಟಗಳು ಮತ್ತು ಜನವಸತಿ ಸಮೀಪದ ಪ್ರದೇಶಗಳಲ್ಲಿ ವ್ಯಾಪಕವಾಗಿ ಕಂಡುಬರುವ ಕೆಂಬೂತವು ಕುಕುಲಿಡೇ (Cuculidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಸೆಂಟ್ರೊಪಸ್ ಸಿನೆನ್ಸಿಸ್ (Centropus sinensis) ಎಂದು ಕರೆಯಲಾಗುತ್ತದೆ. ಇದು ಉದ್ದನೆಯ ಬಾಲ, ಕಂದು ಬಣ್ಣದ ರೆಕ್ಕೆಗಳನ್ನು ಹಾಗೂ ಕೆಂಪು ಬಣ್ಣದ ಕಣ್ಣನ್ನು ಹೊಂದಿರುತ್ತದೆ. ಒಂಟಿಯಾಗಿ ಅಥವಾ ಜೋಡಿಗಳಲ್ಲಿ ವಾಸಿಸುವ ಇವು ಎತ್ತರಕ್ಕೆ ಹಾರದೆ, ನೆಲದ ಮೇಲೆ ಪೊದೆಗಳಡಿಯಲ್ಲಿಯೇ ಆಹಾರವನ್ನರಸುತ್ತಾ ನುಸುಳುತ್ತಿರುತ್ತವೆ. ಹಾವಿನ ಮರಿ, ಹಲ್ಲಿ, ಹಕ್ಕಿಯ ಮರಿ, ಮೊಟ್ಟೆ ಇದರ ಆಹಾರವಾಗಿದೆ. ಇದು ಫೆಬ್ರುವರಿಯಿಂದ ಸೆಪ್ಟೆಂಬರ್ ವರೆಗೆ ಮುಳ್ಳಿನ ಮರಗಳಲ್ಲಿ ಸಾಕಷ್ಟು ಎತ್ತರದಲ್ಲಿ ಕಡ್ಡಿಗಳನ್ನು ಒಟ್ಟುಗೂಡಿಸಿ ದೊಡ್ಡದಾದ ಗೂಡು ಕಟ್ಟುತ್ತದೆ.

ಹೊನ್ನಹಣೆಯ ಎಲೆ ಹಕ್ಕಿ © **ದೀಪಕ್ ಎಲ್. ಎಂ.**

ಭಾರತ, ಶ್ರೀಲಂಕಾ ಮತ್ತು ಆಗ್ನೇಯ ಏಷ್ಯಾದ ಭಾಗಗಳಲ್ಲಿನ ಕಾಡುಗಳು ಮತ್ತು ಪೊದೆಗಳಲ್ಲಿ ಕಂಡುಬರುವ ಹೊನ್ನಹಣೆಯ ಎಲೆ ಹಕ್ಕಿಯು ಕ್ಲೋರೋಪ್ಸಿಡೆ (Chloropseidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಕ್ಲೋರೊಪ್ಸಿಸ್ ಔರಿಫ್ರಾನ್ಸ್ (Chloropsis aurifrons) ಎಂದು ಕರೆಯಲಾಗುತ್ತದೆ. ಹಸಿರು-ದೇಹ, ಕಪ್ಪು ಮುಖ ಮತ್ತು ಹಳದಿ ಅಂಚನ್ನು ಹೊಂದಿರುವ ಕಪ್ಪು ಗಂಟಲು ಮತ್ತು ಕಿತ್ತಳೆ ಬಣ್ಣದ ಹಣೆಯನ್ನು ಹೊಂದಿರುತ್ತದೆ. ಕಪ್ಪು ಬಣ್ಣದ ಪಾದಗಳನ್ನು ಮತ್ತು ಕಪ್ಪು ಬಣ್ಣದ ಕೊಕ್ಕನ್ನು ಸಹ ಹೊಂದಿರುತ್ತದೆ. ಮರದ ಮೇಲೆ ಗೂಡನ್ನು ನಿರ್ಮಿಸಿ, 2-3 ಮೊಟ್ಟೆಗಳನ್ನು ಇಡುತ್ತದೆ. ಕೀಟಗಳು ಮತ್ತು ಹಣ್ಣುಗಳು ಇದರ ಆಹಾರವಾಗಿದೆ. ಇತರ ಪಕ್ಷಿಗಳ ಕರೆಗಳನ್ನು ಅನುಕರಿಸುವುದು ಇದರ ವಿಶೇಷತೆಯಾಗಿದೆ.

ಮೀಸೆ ಚಾಣ © **ದೀಪಕ್ ಎಲ್. ಎಂ.**

ಭಾರತ, ಅಫ್ಘಾನಿಸ್ತಾನ, ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶ ಮತ್ತು ಮ್ಯಾನ್ಮಾರ್ ದೇಶಗಳ ಶುಷ್ಕ ಪ್ರದೇಶಗಳು, ಒಣ ಕಾಡು ಪ್ರದೇಶಗಳು, ಕೃಷಿ ಪ್ರದೇಶಗಳು ಮತ್ತು ಮಾನವ ವಾಸಸ್ಥಾನಗಳ ಬಳಿ ಕಂಡುಬರುವ ಈ ಮೀಸೆ ಚಾಣ ಹಕ್ಕಿಯು ಫಾಲ್ಕೊನಿಡೇ (Falconidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಫಾಲ್ಕೊ ಜಗ್ಗರ್ (*Falco jugger*) ಎಂದು ಕರೆಯಲಾಗುತ್ತದೆ. ಇದರ ದೇಹದ ಮೇಲ್ಭಾಗವು ಬೂದು ಮಿಶ್ರಿತ ಕಂದು ಬಣ್ಣದಲ್ಲಿದ್ದು ಕಪ್ಪು ಗರಿಗಳನ್ನು ಹೊಂದಿರುತ್ತದೆ ಹಾಗು ಕೆಳಭಾಗವು ಕಂದು ಬಣ್ಣದ ಗೆರೆಗಳನ್ನೊಳಗೊಂಡ ತೆಳುವಾದ ಬಿಳಿಯ ಬಣ್ಣದ್ದಾಗಿದೆ. ಇದು ಮಧ್ಯಮ ಗಾತ್ರದ ಬೇಟೆಯ ಹಕ್ಕಿಯಾಗಿದ್ದು ಉದ್ದವಾದ ರೆಕ್ಕೆಗಳನ್ನು ಹೊಂದಿದೆ. ಕೆಲವು ಬಗೆಯ ಪಕ್ಷಿಗಳು, ಸಣ್ಣ ಸಸ್ತನಿಗಳು ಮತ್ತು ಹಲ್ಲಿಗಳು ಇವುಗಳ ಆಹಾರವಾಗಿವೆ. ಅತಿಯಾದ ಕೀಟನಾಶಕಗಳ ಬಳಕೆಯಿಂದ ಇವುಗಳ ಸಂಖ್ಯೆ ಕಡಿಮೆಯಾಗುತ್ತಿದೆ.

ಕಂದು ಗಿಡುಗ © ದೀಪಕ್ ಎಲ್. ಎಂ.

ಆಫ್ರಿಕಾ ಖಂಡದ ಮರುಭೂಮಿ, ಹುಲ್ಲುಗಾವಲುಗಳು ಅಥವಾ ಸವನ್ನಾ ಬಯಲು ಪ್ರದೇಶಗಳಲ್ಲಿ ಕಂಡುಬರುವ ಬೇಟೆಯ ಹಕ್ಕಿಯಾದ ಕಂದು ಗಿಡುಗವು ಆಕ್ಸಿಪಿಟ್ರಿಡೆ (Accipitridae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಅಕ್ವಿಲಾ ರಾಪಾಕ್ಸ್ (*Aquila rapax*) ಎಂದು ಕರೆಯಲಾಗುತ್ತದೆ. ಇದರ ದೇಹದ ಮೇಲ್ಭಾಗವು ಗಾಢ ಬೂದು ಮಿಶ್ರಿತ ಕಂದು ಬಣ್ಣವಿದ್ದು, ಮಸುಕಾದ ಕೆಳಭಾಗವನ್ನು ಹೊಂದಿರುತ್ತದೆ. ದೊಡ್ಡದಾದ ರೆಕ್ಕೆ ಹಾಗು ಬಾಲವು ಕಪ್ಪಾಗಿರುತ್ತದೆ. ಇವು ಕಡ್ಡಿ, ಕೋಲು ಮತ್ತು ಎಲೆಗಳನ್ನು ಸೇರಿಸಿ ಸಮತಟ್ಟಾದ ಗೂಡನ್ನು ತೆರೆದ ಪ್ರದೇಶಗಳಲ್ಲಿ ಅಥವಾ ಮರಗಳಲ್ಲಿ ಕಟ್ಟುತ್ತವೆ. ಹೆಣ್ಣು ಗಿಡುಗವು ಸುಮಾರು ಒಂದರಿಂದ ಮೂರು ಮೊಟ್ಟೆಗಳನ್ನು ಇಡುತ್ತದೆ. ಕೊಳೆತ ಪ್ರಾಣಿಗಳ ಮಾಂಸ, ಸಣ್ಣ-ಪುಟ್ಟ ಹಕ್ಕಿ, ಮೊಲ, ಹಲ್ಲಿ ಮತ್ತು ಹಾವುಗಳು ಇವುಗಳ ಆಹಾರವಾಗಿವೆ. ಕಂದು ಗಿಡುಗಗಳ ದೃಷ್ಟಿ ಹಾಗು ಶ್ರವಣ ಗ್ರಹಿಕೆ ಬಹಳ ತೀಕ್ಷ್ಣವಾಗಿರುತ್ತದೆ.

ಚಿತ್ರ: ದೀಪಕ್ ಎಲ್. ಎಂ.

ಲೇಖನ: ದೀಪ್ತಿ ಎನ್.

ನೀವೂ ಕಾನನಕ್ಕೆ ಬರೆಯಬಹುದು

'ವಿಶ್ವ ಪರ್ವತ ದಿನ' ವನ್ನು ಪ್ರತೀ ವರ್ಷ ಡಿಸೆಂಬರ್ 11ನೇ ತಾರೀಕಿನಂದು ಆಚರಿಸಲಾಗುತ್ತದೆ. ಪರ್ವತಗಳು ತಮ್ಮ ಇರುವಿಕೆಯಿಂದ ಭೂಮಿಯ ಸೌಂದರ್ಯವನ್ನು ಹೆಚ್ಚಿಸುವುದರ ಜೊತೆ ಜೊತೆಗೆ ಪ್ರಾಣಿಗಳಿಗೆ, ಮನುಷ್ಯರಿಗೆ ಹಾಗೂ ಹಲವು ಜೀವಿಗಳಿಗೆ ನಾನಾ ರೀತಿಯಲ್ಲಿ ಸಹಾಯ ಮಾಡುತ್ತವೆ. ವ್ಯವಸಾಯಕ್ಕೆ, ನಮ್ಮ ಎಲ್ಲಾ ದೈನಂದಿನ ಚಟುವಟಿಕೆಗಳಿಗೆ ಮೂಲವಾಗಿರುವ ನದಿಗಳು ಹುಟ್ಟುವುದು ಈ ಪರ್ವತಗಳ ತಪ್ಪಲಿನಲ್ಲಿಯೇ. ಇಷ್ಟು ಮಾತ್ರವಲ್ಲದೆ ಪರ್ವತಗಳು ಮೆಕ್ಕೆಜೋಳ, ಆಲೂಗಡ್ಡೆ, ಬಾರ್ಲಿ, ಸೋರ್ಗಮ್, ಟೊಮ್ಯಾಟೊ ಮತ್ತು ಸೇಬುಗಳನ್ನು ಬೆಳೆಯಲು ಸಹಕಾರಿಯಾಗಿವೆ. ಹಲವಾರು ಔಷಧೀಯ ಸಸ್ಯಗಳಿಗೆ ಪರ್ವತಗಳು ಆಶ್ರಯ ನೀಡುವಲ್ಲಿ, ಇಳೆಗೆ ಮಳೆ ತರುವಲ್ಲಿಯೂ ಸಹ ಪರ್ವತಗಳು ಬಹು ಮುಖ್ಯ ಪಾತ್ರವಹಿಸುತ್ತವೆ. ಆದ್ದರಿಂದ ಪರ್ವತಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪರಿಸರದ ಸಮತೋಲನಕ್ಕೆ ಕಾರಣವಾಗಿದೆ.

ಇದೇ ರೀತಿಯ ಮಾಹಿತಿಗಳನ್ನು ನೀಡಲು ನೀವೂ ಕಾನನಕ್ಕೆ ಬರೆಯಬಹುದು. ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಸಂಚಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

ಕಾನನ ಪತ್ರಿಕೆಯ ಇ-ಮೇಲ್ ವಿಳಾಸ: kaanana.mag@gmail.com
ಅಂಚೆ ವಿಳಾಸ:

ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್,
ಅಡವಿ ಫೀಲ್ಡ್ ಸ್ಟೇಷನ್,
ಒಂಟೆಮಾರನ ದೊಡ್ಡಿ, ರಾಗಿಹಳ್ಳಿ ಅಂಚೆ,
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ,

ಪಿನ್ ಕೋಡ್ : 560083. ಗೆ ಕಳಿಸಿಕೊಡಬಹುದು.